# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

**ದಿನಾಂಕ:03-11-2015 ರಂದು ಬೆಳಗ್ಗೆ 11.30 ಗಂಟೆಗೆ ಸನ್ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರು ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ 64ನೇ ಆಡಳಿತ ಮಂಡಳಿ ಸಭೆಯ ನಡವಳಿ:**

*****

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಶ್ರೀ.ಹೆಚ್. ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಇಲಾಖೆಗಳ ಸಚಿವರು<br>ಹಾಗೂ ಅಧ್ಯಕ್ಷರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು. | ಅಧ್ಯಕ್ಷರು |
| 2. | ಡಾ॥ ಶಾಲಿನಿ ರಜನೀಶ್, ಐ.ಎ.ಎಸ್.<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. | ಉಪಾಧ್ಯಕ್ಷರು |
| 3. | ಶ್ರೀ.ರಿತೇಶ್ ಕುಮಾರ್ ಸಿಂಗ್ ಐ.ಎ.ಎಸ್.,<br>ಸರ್ಕಾರದ ಕಾರ್ಯದರ್ಶಿ,ಆರ್ಥಿಕ ಇಲಾಖೆ(ವೆಚ್ಚ), ಬೆಂಗಳೂರು | ಸದಸ್ಯರು |
| 4. | ಶ್ರೀಮತಿ. ಎಂ.ವಿ.ಸಾವಿತ್ರಿ , ಐ.ಎ.ಎಸ್.,<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 5. | ಶ್ರೀ.ಎಂ.ಆರ್.ಹಿರೇಮಠ್ ಕೆ.ಎ.ಎಸ್.,<br>ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ. | ಸದಸ್ಯ ಕಾರ್ಯದರ್ಶಿ |
| | ವಿಶೇಷ ಆಹ್ವಾನಿತರು | |
| 1. | ಶ್ರೀ.ಇ.ವೆಂಕಟಯ್ಯ ಐ.ಎ.ಎಸ್<br>ನಿವೃತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ<br>ಸಲಹೆಗಾರರು, ಎಸ್.ಸಿ.ಪಿ ಮತ್ತು ಟಿ.ಎಸ್.ಪಿ. | |
| | ಸದಸ್ಯರ ಬದಲಿಗೆ ಹಾಜರಾದವರು | |
| 1 | ಶ್ರೀ.ಪುಟ್ಟಯ್ಯ<br>ಜಂಟಿ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| 2 | ಶ್ರೀ.ಗಣೇಶಪ್ಪ ಎಂ.<br>ಉಪ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| 3 | ಶ್ರೀ.ಅಲ್ಮಾಸ್ ಪರ್ವಿನ್<br>ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| 4. | ಆಯುಕ್ತರು,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಗೈರು ಹಾಜರಿ |
| 5 | ನಿರ್ದೇಶಕರು<br>ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು | ಗೈರು ಹಾಜರಿ |

ಕಾರ್ಯನಿರ್ವಾಹಕ ನಿರ್ದೇಶಕರು, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಿಗೆ, ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರುಗಳಿಗೆ ಇಲಾಖಾ ಮುಖ್ಯಸ್ಥರುಗಳಿಗೆ ಮತ್ತು ಸದಸ್ಯರುಗಳಿಗೆ ಹಾರ್ಥಿಕ ಸ್ವಾಗತವನ್ನು ಬಯಸಿದರು. ಕಾರ್ಯನಿರ್ವಾಹಕ ನಿರ್ದೇಶಕರು, ಮಾನ್ಯ ಸಚಿವರನ್ನು ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿ, ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

<u>ವಿಷಯ ಸಂಖ್ಯೆ: 1</u>

<u>ದಿನಾಂಕ:04-08-2015 ರಂದು ನಡೆದ 64ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ</u>

ದಿನಾಂಕ:04-08-2015ರಂದು ನಡೆದ 64ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸುವುದು.

<u>ತೀರ್ಮಾನ:</u>

**ದಿನಾಂಕ:13-04-2015ರಂದು ನಡೆದ 64ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸಿತು.**

<u>ವಿಷಯ ಸಂಖ್ಯೆ: 2</u>

<u>ದಿನಾಂಕ:04-08-2015 ರಂದು ನಡೆದ 63ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮ:</u>

ದಿನಾಂಕ:04-08-2015 ರಂದು ನಡೆದ 63ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮದ ವಿವರಗಳನ್ನು ಅನುಬಂಧದಲ್ಲಿ ವಿವರಿಸಿ ಆಡಳಿತ ಮಂಡಳಿ ಅನುಮೋದನೆ ಕೋರಿದೆ.

<u>ತೀರ್ಮಾನ:</u>

**ದಿನಾಂಕ:04-08-2015 ರಂದು ನಡೆದ 63ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮಗಳ ಅನುಪಾಲನ ವರದಿಯನ್ನು ಪರಿಶೀಲಿಸಿ, ಅನುಮೋದಿಸಿತು.**

**ದಿನಾಂಕ:04-08-2015 ರಂದು ನಡೆದ 63ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮಗಳ ಅನುಪಾಲನ ವರದಿಯನ್ನು ಪರಿಶೀಲಿಸಿ ಅನುಮೋದಿಸುವಾಗ, 63ನೇ ಆಡಳಿತ ಮಂಡಳಿ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ-3 ರ ತೀರ್ಮಾನಗಳ ಮೇಲೆ ಕೈಗೊಂಡ ಕ್ರಮದ ಬಗ್ಗೆ ಆಡಳಿತ ಮಂಡಳಿ ಸಭೆಯು ವಿಸ್ತೃತವಾಗಿ ಚರ್ಚಿಸಿತು.**

**ವಸತಿ ಶಾಲೆಗಳ ನೇರ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳು ಓಎಂಆರ್ ಶೀಟುಗಳಲ್ಲಿ ಮಾಹಿತಿಯನ್ನು ತಪ್ಪಾಗಿ**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಗುರುತಿಸಿದ್ದ ಅಭ್ಯರ್ಥಿಗಳಿಗೆ ಈ ಕೆಳಕಂಡ ಕಾರಣಗಳನ್ನು ನೀಡಿ, ಹಿಂಬರಹ ನೀಡಲಾಗಿದೆ ಎಂದು ಕಾರ್ಯನಿರ್ವಾಹಕ ನಿರ್ದೇಶಕರು, ಸಭೆಗೆ ವಿವರಿಸಿದರು.

1. ನೇರ ನೇಮಕಾತಿ ಪ್ರಕ್ರಿಯೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ವಹಿಸಲಾಗಿದ್ದು, ಅವರು ತಮ್ಮ ಫಲಿತಾಂಶ ಪಟ್ಟಿಯಲ್ಲಿ **Not eligible** ಎಂದು ಘೋಷಿಸಿರುತ್ತಾರೆ.
2. ಸಂಘದಿಂದ ಹೊರಡಿಸಲಾದ ನೇಮಕಾತಿ ಅಧಿಸೂಚನೆಯ ದಿನಾಂಕ:27-04-2011ರ ಪುಟ ಸಂಖ್ಯೆ: 5 ಕಂಡಿಕೆ 8(2)ರಲ್ಲಿ ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿದಲ್ಲಿ ಅಭ್ಯರ್ಥಿಗಳೇ ಜವಾಬ್ಧಾರರೆಂದು ಯಾವುದೇ ಹಂತದಲ್ಲಿಯೂ ಬದಲಾವಣೆಗೆ ಪರಿಗಣಿಸಲಾಗುವುದಿಲ್ಲವೆಂಬ ಷರತ್ತನ್ನು ವಿಧಿಸಲಾಗಿತ್ತು.
3. ಮಾನ್ಯ ಉಚ್ಚನ್ಯಾಯಾಲಯರ ರಿಟ್ ಅರ್ಜಿ ಸಂಖ್ಯೆ:ಘಾ 20204-20364/2011 ಮತ್ತು ಘಾ 5127/2012 ರಲ್ಲಿ ಅಭ್ಯರ್ಥಿಗಳು ಸಲ್ಲಿಸಿದ ಪ್ರತಿ ಪೂರ್ಣಗೊಂಡ ವರ್ಷದ ಸೇವೆಗೆ ಕೃಪಾಂಕ ನೀಡಲು ತೀರ್ಪ ನೀಡಲಾಗಿದೆಯೇ ಹೊರತು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಫಲಿತಾಂಶ ಪಟ್ಟಿಯಲ್ಲಿ **Not eligible** ಎಂದು ಘೋಷಿಸಿದ ಅಭ್ಯರ್ಥಿಗಳಿಗೆ ಕೃಪಾಂಕಕ್ಕೆ ಒಳಪಡಿಸಬೇಕೆಂದು ಆದೇಶಿಸಿರುವುದಿಲ್ಲ.
4. ಸಂಘವು ಸಾರ್ವಜನಿಕ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕದ ಮುಖಾಂತರ ನಡೆಸಿದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ ಸಲ್ಲಿಸಿದ ನೂರಾರು ಅಭ್ಯರ್ಥಿಗಳ ಅರ್ಜಿಗಳು ಒಎಂಆರ್ ಶೀಟನಲ್ಲಿ ಅವರು ಒದಗಿಸಿದ ಮಾಹಿತಿಗಳ ಆಧಾರದ ಮೇಲೆ ತಿರಸ್ಕರಿಸಲಾಗಿದೆ. ಆದ್ದರಿಂದ ನ್ಯಾಯ ಸಮ್ಮತವಾಗಿ ಎಲ್ಲಾ ಅಭ್ಯರ್ಥಿಗಳಿಗೂ ಒಂದೇ ರೀತಿಯ ಮಾನದಂಡವನ್ನು ಅನುಸರಿಸಲಾಗಿದೆ.
5. ಒಎಂಆರ್ ಶೀಟುಗಳನ್ನು ಭರ್ತಿ ಮಾಡುವಾಗ ಅಭ್ಯರ್ಥಿಗಳು ಒದಗಿಸಿರುವ ಮಾಹಿತಿಯನ್ನಾಧರಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕ ಹೊರಡಿಸಿದ ಅಂತಿಮ ಫಲಿತಾಂಶ ಪಟ್ಟಿಯಲ್ಲಿ **Not eligible** ಎಂದು ಘೋಷಿಸಿರುವುದಿರಂದ ಯಾವುದೇ ರೀತಿಯ ಮಾರ್ಪಾಡುಗಳನ್ನು ಮಾಡಲು ನಿಯಮದಲ್ಲಿ ಅವಕಾಶವಿಲ್ಲವಾದ್ದರಿಂದ ತಿರಸ್ಕರಿಸಿ ಅಂಥಹ ಅಭ್ಯರ್ಥಿಗಳಿಗೆ ಸಂಘವು ಹಿಂಬರಹ ನೀಡಿದೆ ಎಂದು ಕಾರ್ಯನಿರ್ವಾಹಕ ನಿರ್ದೇಶಕರು ಸಭೆಗೆ ವಿವರಿಸಿದರು.

ಮೇಲ್ಕಂಡ ವಿವರಣೆಯನ್ನು ಸಭೆಯು ಅವಲೋಕಿಸಿ ಅನುಮೋದಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

## ವಿಷಯಯ ಸಂಖ್ಯೆ: 3

## 2015-16ನೇ ಸಾಲಿನಲ್ಲಿ ಸಂಘಕ್ಕೆ ನಿಗಧಿಪಡಿಸಿದ ಅನುದಾನ, ಬಿಡುಗಡೆ, ಖರ್ಚು ಹಾಗೂ ಶಿಲ್ಕಿನ ವಿವರಗಳು

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ 2015-16ನೇ ಸಾಲಿನ ಆಯವ್ಯಯದಲ್ಲಿ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳು ನಿಗಧಿಗೊಳಿಸಿದ ಅನುದಾನ, ದಿನಾಂಕ:30-09-2015ರ ಅಂತ್ಯಕ್ಕೆ ಬಿಡುಗಡೆ ಮಾಡಿದ ಮತ್ತು ಭರಿಸಿದ ವೆಚ್ಚದ ವಿವರಗಳು ಈ ಕೆಳಕಂಡಂತೆ ಇವೆ.

| ಕ್ರ. ಸಂ | ಇಲಾಖೆಗಳ ವಿವರ | ರೂ.ಲಕ್ಷಗಳಲ್ಲಿ | | | | |
|---|---|---|---|---|---|---|
| | | ಪ್ರಾರಂಭಿಕ ಶಿಲ್ಕು | 2015-16ನೇ ಸಾಲಿನಲ್ಲಿ ನಿಗಧಿಗೊಳಿಸಿದ ಅನುದಾನ | ಬಿಡುಗಡೆ ಯಾದ ಅನುದಾನ | 30-09-2015ರ ಅಂತ್ಯಕ್ಕೆ ಭರಿಸಿದ ವೆಚ್ಚ | ಉಳಿಕೆಯಾದ ಅನುದಾನ |
| 1 | ಸಮಾಜ ಕಲ್ಯಾಣ ಇಲಾಖೆ | 25243.58 | 70693.00 | 37093.00 | 17739.51 | 15590.99 |
| 2 | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | 26140.65 | 13091.00 | 3272.75 | 17417.12 | 11996.28 |
| 3 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 3450.48 | 18861.00 | 9430.5 | 6276.00 | 2742.12 |
| | ಒಟ್ಟು | **54834.71** | **102645** | **49796.25** | **41432.63** | **30329.39** |

ಲೆಕ್ಕಶೀರ್ಷಿಕೆವಾರು ಬಿಡುಗಡೆಯಾದ, ಭರಿಸಿದ ವೆಚ್ಚದ ವಿವರಗಳನ್ನು ಅನುಬಂಧಗಳಲ್ಲಿ ತೋರಿಸಿದೆ.

### ತೀರ್ಮಾನ:

**ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ 2015-16ನೇ ಸಾಲಿನ ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ನಿಗಧಿಗೊಳಿಸಿದ ಅನುದಾನ, ಸೆಪ್ಟಂಬರ್ 2015ರ ಅಂತ್ಯಕ್ಕೆ ಬಿಡುಗಡೆ ಮತ್ತು ಭರಿಸಿದ ವೆಚ್ಚದ ವಿವರಗಳನ್ನು ಅವಲೋಕಿಸಿ, ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ: 4

ವಸತಿ ಶಾಲೆ/ಕಾಲೇಜುಗಳ ಕಟ್ಟಡ ಕಾಮಗಾರಿಗಳ ಹಾಗೂ ವಿದ್ಯಾರ್ಥಿನಿಲಯಗಳ ಕಟ್ಟಡಗಳ ಕಾಮಗಾರಿಗಳ ಪರಿಷ್ಕೃತ ಪರಿಮಾಣವನ್ನು ಅನುಮೋದಿಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 44ನೇ ಆಡಳಿತ ಮಂಡಳಿ ಸಭೆಯಲ್ಲಿ ಕಾಮಗಾರಿಗಳ ಅನುಮೋದಿತ ಪರಿಮಾಣವು ಹೆಚ್ಚಾಗಿ, ಅನುಮೋದಿತ ಮೊತ್ತಕ್ಕಿಂತ ಶೇ.5 ರಷ್ಟು ಕಾಮಗಾರಿಯ ಮೊತ್ತವು ಹೆಚ್ಚಾದಲ್ಲಿ ಕಾಮಗಾರಿಯ ಮೊತ್ತವನ್ನು ಅನುಮೋದಿತ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಶೇ.5ರಷ್ಟು ಮೊತ್ತಕ್ಕೆ ಪರಿಷ್ಕೃತ ಬಿ.ಓ.ಕ್ಯೂ ಅನುಮೋದಿಸುವ ಅಧಿಕಾರವನ್ನು ಸಂಘದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು ಅನುಬಂಧದಲ್ಲಿ ತೋರಿಸಿದ 6 ಕಾಮಗಾರಿಗಳ ಪರಿಷ್ಕೃತ ಪರಿಮಾಣವನ್ನು (Revised BOQ) ಅನುಮೋದಿಸಿರುತ್ತಾರೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿ ಸಭೆಯು ಮೊರಾರ್ಜಿ ದೇಸಾಯಿ ವಸತಿ ಶಾಲೆ/ವಿದ್ಯಾರ್ಥಿನಿಲಯಗಳು/ನಿರಾಶ್ರಿತರ ಪರಿಹಾರ ಕೇಂದ್ರಗಳ ಕಟ್ಟಡಗಳ ಕಾಮಗಾರಿಗಳ ಪರಿಷ್ಕೃತ ಪರಿಮಾಣವನ್ನು (Revised BOQ) ಅನುಮೋದಿಸಿದ ಕ್ರಮವನ್ನು ಅವಲೋಕಿಸಿ ಅನುಮೋದಿಸಿತು.**

ವಿಷಯ ಸಂಖ್ಯೆ: 5

ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಪ್ರಾಂಶುಪಾಲರು, ಉಪನ್ಯಾಸಕರುಗಳು ಹಾಗೂ ಇತರೆ ಬೋಧಕೇತರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ಲೋಕಾಸೇವಾ ಆಯೋಗಕ್ಕೆ ವಹಿಸಲು ವಿಷಯವನ್ನು ವಿಶೇಷ ಸರ್ವಸಾಮಾನ್ಯ ಸದಸ್ಯರ ಸಭೆಗೆ ಮಂಡಿಸುವ ಬಗ್ಗೆ

ಸರ್ಕಾರದ ಆದೇಶ ಸಂಖ್ಯೆ: ಸಕಇ 33 ಮೊದೇಶಾ 2008, ದಿನಾಂಕ:07-07-2009ರಲ್ಲಿ ಜಿಲ್ಲೆಗೆ ಒಂದರಂತೆ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳನ್ನು ಮಂಜೂರು ಮಾಡಿ ಅದೇಶಿಸಿದೆ. ಸದರಿ ಕಾಲೇಜುಗಳಿಗೆ ವಿವಿಧ ವೃಂದದ 19 ಹುದ್ದೆಗಳನ್ನು ಸೃಜಿಸಿ ಮಂಜೂರಾತಿ ನೀಡಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಪ್ರಸ್ತುತ ಸಂಘದ ವ್ಯಾಪ್ತಿಯಲ್ಲಿ 12 ಪರಿಶಿಷ್ಟ ಜಾತಿ, 12 ಹಿಂದುಳಿದ ವರ್ಗ, ಹಾಗೂ 2 ಪರಿಶಿಷ್ಟ ವರ್ಗಗಳ ಒಟ್ಟು 26 ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, PCMB (ಭೌತಶಾಸ್ತ್ರ,ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ) ಮತ್ತು PCMCs (ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಗಣಕಯಂತ್ರ ಶಾಸ್ತ್ರ) ಸಂಯೋಜನೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳನ್ನು ಪ್ರತಿ ತರಗತಿಗೆ 2 ವಿಭಾಗಗಳಂತೆ ಬೋಧಿಸಲಾಗುತ್ತಿದೆ. ವಸತಿ ಶಾಲೆಗಳಿಗೆ ಖಾಯಂ ಆಗಿ ನೇಮಕವಾಗಿರುವ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಪ್ರಾಂಶುಪಾಲರುಗಳನ್ನು ನಿಯೋಜನೆ ಮೇಲೆ ನೇಮಕ ಮಾಡಿಕೊಂಡು ಹಾಗೂ ಪ್ರಾಂಶುಪಾಲರುಗಳು, ನಿಲಯಪಾಲಕರುಗಳು ಹಾಗೂ ದ್ವಿತೀಯ ದರ್ಜೆ ಸಹಾಯಕರು ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿದ್ದಾರೆ.

ಸರ್ಕಾರದ ಆದೇಶ ಸಂಖ್ಯೆ:ಸಕಇ 70 ಮೊದೇಶಾ 2010, ಬೆಂಗಳೂರು, ದಿನಾಂಕ:04-01-2012 ರಲ್ಲಿ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ವಿನಿಗುಮಗಳನ್ನು ರಚಿಸಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಕಇ 33 ಮೊದೇಶಾ 2008, ಬೆಂಗಳೂರು, ದಿನಾಂಕ:04-07-2012ರಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳ ಅನ್ವಯ ಖಾಯಂ ಆಗಿ ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಸಹಮತಿ ನೀಡಿ ಆದೇಶಿಸಿದೆ.

| ಕ್ರ. ಸಂ | ಹುದ್ದೆಯ ಪದನಾಮ | ಸಂಖ್ಯೆ |
|---|---|---|
| 1 | ಪ್ರಾಂಶುಪಾಲರು (ರೂ.30400-51300) | 26 |
| 2 | ಕನ್ನಡ ಬಾಷಾ ಉಪನ್ಯಾಸಕರು (ರೂ.22800-43200) | 26 |
| 3 | ಇಂಗ್ಲೀಷ್ ಭಾಷಾ ಉಪನ್ಯಾಸಕರು (ರೂ.22800-43200) | 26 |
| 4 | ಭೌತಶಾಸ್ತ್ರ ಉಪನ್ಯಾಸಕರು (ರೂ.22800-43200) | 26 |
| 5 | ರಸಾಯನಶಾಸ್ತ್ರ ಐಚ್ಛಿಕ ವಿಷಯ ಉಪನ್ಯಾಸಕರು (ರೂ.22800-43200) | 26 |
| 6 | ಗಣಿತ ಐಚ್ಛಿಕ ವಿಷಯ ಉಪನ್ಯಾಸಕರು (ರೂ.22800-43200) | 26 |
| 7 | ಜೀವಶಾಸ್ತ್ರ ಐಚ್ಛಿಕ ವಿಷಯ ಉಪನ್ಯಾಸಕರು (ರೂ.22800-43200) | 26 |
| 8 | ಗಣಕಯಂತ್ರ ಐಚ್ಛಿಕ ಉಪನ್ಯಾಸಕರು (ರೂ.22800-43200) | 26 |
| 9 | ನಿಲಯಪಾಲಕರು (ರೂ.20000-36300) | 26 |
| 10 | ದ್ವಿತೀಯ ದರ್ಜೆ ಸಹಾಯಕರು (ಗಣಕಯಂತ್ರ ಜ್ಞಾನವುಳ್ಳವರು) (ರೂ.11600-211000) . (3 ದ್ವಿ.ದ.ಸ ಹುದ್ದೆಗಳು ಖಾಯಂ ಆಗಿ ಭರ್ತಿ ಮಾಡಿಕೊಳ್ಳಲಾಗಿದೆ.) | 23 |
| | ಒಟ್ಟು | 257 |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಈ ಕಾಲೇಜುಗಳಲ್ಲಿ ವಿಜ್ಞಾನ ವಿಷಯದ ಸಂಯೋಜನೆಗಳನ್ನು ಬೋಧಿಸುತ್ತಿದ್ದು, ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಅನುಕೂಲವಾಗುವಂತೆ ನುರಿತ ಉಪನ್ಯಾಸಕರುಗಳಿಂದ ವಿದ್ಯಾಭ್ಯಾಸ ನೀಡಬೇಕಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಆರ್ಥಿಕ ಇಲಾಖೆಯು ಖಾಯಂ ಆಗಿ ಭರ್ತಿ ಮಾಡಿಕೊಳ್ಳಲು ಅನುಮೋದಿಸಿರುವ ಮೇಲ್ಕಂಡ 257 ಹುದ್ದೆಗಳನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳ ಅನ್ವಯ ಪದವಿ ಪೂರ್ವ ಶಿಕ್ಷಣ ಇಲಾಖೆಯು ನಿಗಧಿಪಡಿಸಿರುವ ಪಠ್ಯಕ್ರಮವನ್ನಾಧರಿಸಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ (Combined Competitive Examination) ಮೂಲಕ ನೇರ ನೇಮಕಾತಿ ಮಾಡಿಕೊಳ್ಳಬಹುದಾಗಿದೆ. ಪ್ರಸ್ತುತ ವೃಂದ ಮತ್ತು ನೇಮಕಾತಿ ವಿನಿಯಮಗಳ ಷೆಡ್ಯೂಲ್-1ರಲ್ಲಿ ಹೇಳಲಾದ ಎಲ್ಲಾ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುವಾಗ ಸಂಘದ ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ರಚಿತವಾಗಿರುವ ನೇಮಕಾತಿ ಸಮಿತಿಯಿಂದ ನೇಮಕ ಮಾಡಿಕೊಳ್ಳಬೇಕು ಎಂಬ ಮಾನದಂಡವನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳ ಷೆಡ್ಯೂಲ್-2 ರಲ್ಲಿ ವಿಧಿಸಿದೆ. ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ವಹಿಸಲು ನಿರ್ಧರಿಸಿರುವುದರಿಂದ, ಸಂಘದ ಆಡಳಿತ ಮಂಡಳಿಯು ಸೃಜಿಸಿದ ನೇಮಕಾತಿ ಸಮಿತಿ/ಕರ್ನಾಟಕ ಲೋಕಾಸೇವಾ ಆಯೋಗ ಎಂದು ಮಾರ್ಪಾಟು ಮಾಡಿಕೊಂಡು, 26 ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ 257 ಅಗತ್ಯ ಹುದ್ದೆಗಳನ್ನು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ (Combined Competitive Examination) ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಪ್ರಕ್ರಿಯೆಯನ್ನು ಲೋಕಸೇವಾ ಆಯೋಗಕ್ಕೆ ವಹಿಸುವ ಬಗ್ಗೆ ವಿಷಯವನ್ನು ಸಂಘದ ವಿಶೇಷ ಸರ್ವಸಾಮಾನ್ಯ ಸದಸ್ಯರ ಸಭೆಗೆ ಮಂಡಿಸಲು ಅನುಮೋದನೆ ಕೋರಿದೆ.

<u>ತೀರ್ಮಾನ:</u>

**ಪ್ರಸ್ತುತ 26 ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ 257 ಅಗತ್ಯ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ ನೇಮಕಾತಿ ಪ್ರಕ್ರಿಯೆಯನ್ನು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ (Combined Competitive Examination) ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ವಹಿಸುವ ಬಗ್ಗೆ ಅನುಮೋದಿಸಿ, ವಿಷಯವನ್ನು ಸಂಘದ ವಿಶೇಷ ಸರ್ವ ಸಾಮಾನ್ಯ ಸದಸ್ಯರ ಮಹಾಸಭೆಗೆ ಮಂಡಿಸಲು ತೀರ್ಮಾನಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 6</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ (Delegation of Powers) ನೀಡುವ ಬಗ್ಗೆ</u>

ಸರ್ಕಾರದ ಆದೇಶ ಸಂಖ್ಯೆ: ಸಕಇ 536 ಎಸ್‌ಇಡಬ್ಲ್ಯೂ 1999, ದಿನಾಂಕ:06-10-1999 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಮಂಜೂರು ಮಾಡಿದೆ. ಪ್ರಸ್ತುತ 505 ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ಶಾಲೆಗಳ ನಿರ್ವಹಣೆ, ಕಟ್ಟಡಗಳ ನಿರ್ಮಾಣ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಜವಾಬ್ದಾರಿ ಹೊಂದಿರುತ್ತದೆ. ಇದರೊಂದಿಗೆ ವಸತಿ ಶಾಲೆಗಳ ನಿರ್ವಹಣೆಗೆ ಸಂಬಂಧಿಸಿದ ಮಾಹಿತಿಗಳನ್ನು ಸರ್ಕಾರಕ್ಕೂ ಶಾಸನಬದ್ಧ ಸಮಿತಿಗಳಿಗೆ ಮತ್ತು ಇತರೆ ಉನ್ನತ ಮಟ್ಟದ ಅಧಿಕಾರಿಗಳಿಗೆ ಆಗಿಂದಾಗ್ಗೆ ನೀಡುವ ಜವಾಬ್ದಾರಿ ಸೇರಿದಂತೆ ಸಭೆ ಸಮಾರಂಭಗಳಿಗೆ ಕಾರ್ಯನಿರ್ವಾಹಕ ನಿರ್ದೇಶಕರು ಹಾಜರಾಗಬೇಕಾಗುತ್ತದೆ.

ಸಂಘದ ಅಧಿಕಾರಿಗಳಿಗೆ ನಿರ್ದಿಷ್ಟವಾದ ಅಧಿಕಾರವನ್ನು ಪ್ರತ್ಯಾಯೋಜಿಸಿರುವುದಿಲ್ಲ. ಸಂಘದ ಕಾರ್ಯದ ಒತ್ತಡವನ್ನು ಮನಗಂಡು, ಸಂಘದ ಉಪಾಧ್ಯಕ್ಷರು, ಕಾರ್ಯನಿರ್ವಾಹಕ ನಿರ್ದೇಶಕರು, ಜಂಟಿ ನಿದೇಶಕರುಗಳು ಮತ್ತು ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಾರ್ಯವ್ಯಾಪ್ತಿಯನ್ನು ಪ್ರತ್ಯಾಯೋಜಿಸುವುದು ಅಗತ್ಯವಾಗಿದೆ. ಇದೇ ರೀತಿ ವಸತಿ ಶಾಲೆಗಳ ನಿರ್ವಹಣೆಗೂ ಸಹ ಅಧಿಕಾರ ಪ್ರತ್ಯಾಯೋಜನೆ ಅಗತ್ಯವಾಗಿದ್ದು, ಪ್ರತ್ಯಾಯೋಜನೆಯನ್ನು ಅನುಬಂಧದಲ್ಲಿ ತೋರಿಸಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಸಂಘದ ಅಧಿಕಾರ ಪ್ರತ್ಯಾಯೋಜನೆಯನ್ನು ಅನುಮೋದಿಸಲು ಕೋರಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ, ಪ್ರತ್ಯಾಯೋಜನೆಯ ಪ್ರಸ್ತಾವನೆಗೆ ಈ ಕೆಳಕಂಡ ಮಾರ್ಪಾಟುಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ) ಇವರು ಸೂಚಿಸಿರುತ್ತಾರೆ.**

1. **ವಿಷಯ ಸೂಚಿಯ ಪುಟ ಸಂಖ್ಯೆ 44 ರಲ್ಲಿ ಕ್ರಮಸಂಖ್ಯೆ 1 ರಲ್ಲಿ ಪ್ರಸ್ತಾಪಿಸಿದ ಶಾಶ್ವತ ಕಾಮಗಾರಿಗಳ ಅಂದಾಜು ಪಟ್ಟಿ ಮೊತ್ತ ರೂ.5.00 ಕೋಟಿಗಳು ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆಯುವ ಮುನ್ನಾ ಸಂಘದ ಆಡಳಿತ, ಮಂಡಳಿಯ ಅನುಮೋದನೆ ಪಡೆದು ನಂತರ ಸಚಿವ ಸಂಪುಟ ಸಭೆಯ ಅನುಮೋದನೆ ಪಡೆಯಲು ಪ್ರಸ್ತಾಪಿಸಬೇಕೆಂದು ಸೂಚಿಸಿದರು.**
2. **ವಿಷಯ ಸೂಚಿಯ ಪುಟ ಸಂಖ್ಯೆ 45 ರಲ್ಲಿ ಕ್ರಮಸಂಖ್ಯೆ 4 ರಲ್ಲಿ ಪ್ರಸ್ತಾಪಿಸಿದ ಆರ್ಥಿಕ ಪ್ರತ್ಯಾಯೋಜನೆಯೊಂದಿಗೆ ರೂ. 3.00 ಕೋಟಿಯವರೆಗೆ ಅಂದಾಜುಪಟ್ಟಿಗೆ ಉಪಾಧ್ಯಕ್ಷರು ಅನುಮೋದಿಸಲು ಸೂಚಿಸಿದರು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

3. ವಿಷಯ ಸೂಚಿಯ ಪುಟ ಸಂಖ್ಯೆ 45 ರಲ್ಲಿ ಕ್ರಮಸಂಖ್ಯೆ 6 ರಲ್ಲಿ ಪ್ರಸ್ತಾಪಿಸಿದ ಆರ್ಥಿಕ ಪ್ರತ್ಯಾಯೋಜನೆಯೊಂದಿಗೆ ಕಾಮಗಾರಿಯ ಮೊತ್ತವು ರೂ.20.00 ಕೋಟಿಗಳಿಗಿಂತ ಹೆಚ್ಚಾದಲ್ಲಿ ಆಡಳಿತ ಮಂಡಳಿಯ ಸಭೆಯಲ್ಲಿ ಟೆಂಡರ್‌ಗೆ ಅನುಮೋದನೆ ಪಡೆದು ಕಾರ್ಯಾದೇಶ ನೀಡಬೇಕೆಂದು ಸೂಚಿಸಿದರು.
4. ವಿಷಯ ಸೂಚಿಯ ಪುಟ ಸಂಖ್ಯೆ 45ರ ಕ್ರಮ ಸಂಖ್ಯೆ:7 ರಲ್ಲಿ ಪ್ರಸ್ತಾಪಿಸಿದ ಪ್ರತ್ಯಾಯೋಜನೆ ಶಾಶ್ವತ ಕಾಮಗಾರಿಯ ಅಂದಾಜು ಪಟ್ಟಿಯ ಪರಿಮಾಣ ಮೊತ್ತವು ಪರಿಷ್ಕೃತ ಪರಿಮಾಣದಿಂದಾಗಿ 3.00 ಕೋಟಿಗೆ ಸೀಮಿತವಾದಲ್ಲಿ ಉಪಾಧ್ಯಕ್ಷರು ಅನುಮೋದಿಸುವುದು. ರೂ.3.00 ಕೋಟಿಗೂ ಮೇಲ್ಪಟ್ಟ ಹಾಗೂ ರೂ.5.00 ಕೋಟಿಗಳವರೆಗಿನ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಮುನ್ನಾ ಲೋಕೋಪಯೋಗಿ ಇಲಾಖೆಯ ಸಂಹಿತೆಯ ನಿಯಮಾವಳಿಯಂತೆ, ಆರ್ಥಿಕ ಇಲಾಖೆಯ ಒಪ್ಪಿಗೆ ಪಡೆಯುವುದು ಅಗತ್ಯವೆಂದು ತಿಳಿಸಿದರು.

   ಆಡಳಿತ ಮಂಡಳಿಯು ಪ್ರಸ್ತಾಪಿಸಿದ ಅಧಿಕಾರ ಪ್ರತ್ಯಾಯೋಜನೆಯ ಪ್ರಸ್ತಾವನೆಯನ್ನು ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು ಸೂಚಿಸಿದ ಮಾರ್ಪಾಟುಗಳೊಂದಿಗೆ ಸಭೆಯು ಅನುಮೋದಿಸಿತು.
5. ವಿಷಯ ಸೂಚಿಯ ಪುಟ ಸಂಖ್ಯೆ 41 ರ ಕ್ರಮಸಂಖ್ಯೆ:3 ರಲ್ಲಿ ಪ್ರಸ್ತಾಪಿಸಿದ ಸಂಘದ ಕೇಂದ್ರ ಕಛೇರಿ/ವಸತಿ ಶಾಲೆಗಳಲ್ಲಿ ಅಳವಡಿಸಿದ ಯಂತ್ರಗಳ/ಉಪಕರಣಗಳ ಖರೀದಿ, ನಿರ್ವಹಣೆ ಮತ್ತು ದುರಸ್ತಿಗಳ ವೆಚ್ಚವನ್ನು ಮಂಜೂರು ಮಾಡುವುದಕ್ಕೆ ಕಾರ್ಯನಿರ್ವಾಹಕ ನಿರ್ದೇಶಕರಿಗೆ ರೂ.5.00 ಲಕ್ಷಗಳವರೆಗೆ ಹಾಗೂ ಉಪಾಧ್ಯಕ್ಷರಿಗೆ ರೂ.5.00 ಲಕ್ಷಗಳಿಗೆ ಮೇಲ್ಪಟ್ಟು ಹಾಗೂ ರೂ.1.00 ಕೋಟಿಗಳವರೆಗೆ ಅಧಿಕಾರ ಪ್ರತ್ಯಾಯೋಜನೆ ನೀಡಲು ತೀರ್ಮಾನಿಸಿತು.

ವಿಷಯ ಸಂಖ್ಯೆ: 7

ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011 ರಲ್ಲಿ ಸಂದರ್ಶನ ಮಾನದಂಡವನ್ನು ವಿಧಿಸಿ ಸರ್ಕಾರ ಆದೇಶ ಹೊರಡಿಸಲಾಗಿದ್ದು, ಸಂಘದ ನಿಯಮ ಮತ್ತು ನಿಬಂಧನೆಗಳಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ವಿಷಯವನ್ನು ವಿಶೇಷ ಸರ್ವ ಸಾಮಾನ್ಯ ಸದಸ್ಯರ ಸಭೆಗೆ ಮಂಡಿಸುವ ಬಗ್ಗೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿ ಶಾಲೆಗಳ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲು ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ(Combined Competitive Examinations)ಯನ್ನು ನಿಗಧಿಪಡಿಸಿದ್ದು, ಪರೀಕ್ಷೆಯಲ್ಲಿ ಗಳಿಸಿದ ಅಂಕ,(70%) ಮತ್ತು ನಿಗಧಿತ ವಿದ್ಯಾರ್ಹತೆ(30%)ಯನ್ನುಪರಿಗಣನೆಗೆ ತೆಗೆದುಕೊಂಡು ಮೆರಿಟ್ ಮತ್ತು ಮೀಸಲಾತಿ ನಿಯಮದನ್ವಯ ಆಯ್ಕೆಗೊಳಿಸಲು ವಿನಿಯಮಗಳಿರುತ್ತವೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಪ್ರಾರಂಭಿಸಿದ್ದು, ಈ ವಸತಿ ಶಾಲೆಗಳಿಗೆ ನೇಮಕವಾಗುವ ಸಿಬ್ಬಂದಿಗಳು, ಕೇವಲ ಶೈಕ್ಷಣಿಕ ಕಾರ್ಯವನ್ನು ನಿರ್ವಹಿಸುವುದು ಮಾತ್ರವಲ್ಲದೇ, ಪೋಷಕರ ಪಾತ್ರವನ್ನೂ ಸಹ ಸಮರ್ಥವಾಗಿ ನಿರ್ವಹಿಸಿ, ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವಂತವರಾಗಿರಬೇಕೆಂಬುದನ್ನು ಮನಗಂಡು, ಸನ್ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ವಸತಿ ಶಾಲೆಗಳಿಗೆ ಅಗತ್ಯ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅಭ್ಯರ್ಥಿಗಳ ಆಯ್ಕೆಯ ಸಂದರ್ಭದಲ್ಲಿ ಕೇವಲ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಸೀಮಿತಗೊಳ್ಳದೇ, ಸಂದರ್ಶನದ ಮಾನದಂಡ (Interview) ಅಗತ್ಯವೆಂದು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆಯಅನುಮೋದನೆಯೊಂದಿಗೆ ಹಾಲಿ ಇರುವ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ಶೇ.12.5% ಸಂದರ್ಶನ ಮಾನದಂಡವನ್ನು ವಿಧಿಸಿ, ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿದೆ.

ಸರ್ಕಾರವು ವೃಂದ ಮತ್ತು ನೇಮಕಾತಿ ವಿನಿಯಮಗಳ ಬಗ್ಗೆ ಹೊರಡಿಸುವ' ತಿದ್ದುಪಡಿಗಳನ್ನು ಸಂಘದ ಮೆಮೊರಂಡಮ್ ಆಫ್ ಅಸೋಷಿಯೇಷನ್‌ಗೆ ನಿಯಮಾನುಸಾರ ಅಳವಡಿಸಿಕೊಳ್ಳುವ ಬಗ್ಗೆ ವಿಷಯವನ್ನು ಸಂಘದ ವಿಶೇಷ ಸರ್ವಸಾಮಾನ್ಯ ಸದಸ್ಯರ ಮಹಾಸಭೆಗೆ ಮಂಡಿಸಲು ಆಡಳಿತ ಮಂಡಳಿ ಸಭೆಯ ಅನುಮೋದನೆ ಕೋರಿದೆ.

ತೀರ್ಮಾನ:

**ಆಡಳಿತ ಮಂಡಳಿಯು ವಿಷಯದ ಬಗ್ಗೆ ಚರ್ಚಿಸಿ, ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ) ರವರು ಜನವರಿ 2016 ರಿಂದ ನೇಮಕಾತಿಯಲ್ಲಿ ಸಂದರ್ಶನ ಮಾನದಂಡಗಳನ್ನು ತೆಗೆದುಹಾಕುವ ಬಗ್ಗೆ ಸನ್ಮಾನ್ಯ ಭಾರತದ ಪ್ರಧಾನ ಮಂತ್ರಿಗಳು ಇತ್ತೀಚಿನ ಹೇಳಿಕೆ ನೀಡಿರುವುದನ್ನು ಸಭೆಯ ಮುಂದೆ ಸ್ಮರಿಸಿಕೊಂಡರು. ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ನೇಮಕಾತಿ ವಿನಿಯಮಗಳಿಗೆ ಶೇ.12.5%ಗಳ ಅಂಕಕ್ಕೆ ಸಂದರ್ಶನ ಮಾನದಂಡವನ್ನು ಅಳವಡಿಸಿಕೊಂಡಿರುವುದನ್ನು ಅನುಮೋದಿಸಿತು. ತಿದ್ದುಪಡಿ ಆದೇಶವನ್ನು ಸಂಘದ ಸರ್ವ ಸದಸ್ಯರ ಮಹಾಸಭೆಗೆ ಮಂಡಿಸಿ, ಅನುಮೋದನೆ ಪಡೆದು ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ಅಳವಡಿಸಿಕೊಳ್ಳಲು ತೀರ್ಮಾನಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

# ವಿಷಯ ಸಂಖ್ಯೆ: 7 ರ ಮೇಲಿನ ಮಾರ್ಪಾಡು ತೀರ್ಮಾನ

## ಮಾರ್ಪಡಿಸಿದ ತೀರ್ಮಾನ:

ಆಡಳಿತ ಮಂಡಳಿಯು ವಿಷಯದ ಬಗ್ಗೆ ಚರ್ಚಿಸಿ, ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ) ರವರು ಜನವರಿ 2016 ರಿಂದ ನೇಮಕಾತಿಯಲ್ಲಿ ಸಂದರ್ಶನ ಮಾನದಂಡಗಳನ್ನು ತೆಗೆದುಹಾಕುವ ಬಗ್ಗೆ ಸನ್ಮಾನ್ಯ ಭಾರತದ ಪ್ರಧಾನ ಮಂತ್ರಿಗಳು ಇತ್ತೀಚಿನ ಹೇಳಿಕೆ ನೀಡಿರುವುದನ್ನು ಸಭೆಯ ಮುಂದೆ ಸ್ಮರಿಸಿಕೊಂಡರು. ನೇಮಕಾತಿ ಪ್ರಕ್ರಿಯೆಯಲ್ಲಿ ಸಂದರ್ಶನ ಮಾಡುವುದರಿಂದ ಒಂದು Subjective ಅಂಶವು ಪ್ರಾರಂಭವಾಗಿ ವೃಂದ ಮತ್ತು ನೇಮಕಾತಿ ವಿನಿಯಮಗಳ ಪಾರದರ್ಶಕತೆಯ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ವೃಂದ ಮತ್ತು ನೇಮಕಾತಿ ವಿನಿಯಮಗಳ ಪಾರದರ್ಶಕತೆಯ ಮೇಲೆ ಪ್ರಭಾವ ಬೀರುತ್ತದೆ. ಆದುದರಿಂದ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ಸಂದರ್ಶನದ ಮಾನದಂಡಗಳಿಗೆ ತಿದ್ದುಪಡಿ ಮಾಡುವುದು ಸೂಕ್ತವೆನಿಸುವುದಿಲ್ಲ" ಎಂದು ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆವರು ಅಭಿಪ್ರಾಯ ನೀಡಿದರು.

ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಈಗಾಗಲೇ ಸರ್ಕಾರದ ಅನುಮೋದನೆಯೊಂದಿಗೆ ನೇಮಕಾತಿ ವಿನಿಯಮಗಳಿಗೆ ಶೇ.12.5%ಗಳ ಅಂಕಕ್ಕೆ ಸಂದರ್ಶನ ಮಾನದಂಡವನ್ನು ಅಳವಡಿಸಿಕೊಂಡಿರುವುದನ್ನು ಅನುಮೋದಿಸಿತು. ತಿದ್ದುಪಡಿ ಆದೇಶವನ್ನು ಸಂಘದ ವಿಶೇಷ ಸರ್ವ ಸದಸ್ಯರ ಮಹಾಸಭೆಗೆ ಮಂಡಿಸಿ, ಅನುಮೋದನೆ ಪಡೆಯಲು ತೀರ್ಮಾನಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 8**

**ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಸರ್ಕಾರದ ಆದೇಶದಂತೆ, ಪಿಯುಸಿ ವಿದ್ಯಾರ್ಹತೆಯನ್ನು ನಿಗಧಿಪಡಿಸಿ, ವೃಂದ ಮತ್ತು ನೇಮಕಾತಿ ವಿನಿಯಮಗಳು-2011ಕ್ಕೆ ತಿದ್ದುಪಡಿ ತರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011ರಲ್ಲಿ ದ್ವಿತೀಯ ದರ್ಜೆ ಸಹಾಯಕರು ಕಮ್ ಕಂಪ್ಯೂಟರ್ ಆಪರೇಟರ್ ಹುದ್ದೆಗಳಿಗೆ ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ.

"Must have passed SSLC examination or equivalent examination recognized by Government. Must have computer working knowledge with six months computer course certificate recognized by Government of Karnataka or by Society."

ಆದರೆ, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 18 ಸೇವನೆ 2013, ದಿನಾಂಕ: 13-12-2013 ರಲ್ಲಿ ದ್ವಿತೀಯ ದರ್ಜೆ ಸಹಾಯಕರ ವೃಂದದ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯ ಬದಲು ಪಿಯುಸಿ ವಿದ್ಯಾರ್ಹತೆಯನ್ನು ನಿಗಧಿಪಡಿಸಿ, ತಿದ್ದುಪಡಿ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011 ಕ್ಕೆ ದ್ವಿತೀಯ ದರ್ಜೆ ಸಹಾಯಕರು ಕಮ್ ಕಂಪ್ಯೂಟರ್ ಆಪರೇಟರ್ ಹುದ್ದೆಗಳಿಗೆ ಸರ್ಕಾರದ ಆದೇಶದನ್ವಯ ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ನಿಗಧಿಪಡಿಸಿ ತಿದ್ದುಪಡಿ ಆದೇಶ ಹೊರಡಿಸಬೇಕಾಗಿದೆ.

"Must have passed PUC Examination or equivalent Examination recognized by the Government of Karnataka. Must have computer working knowledge with six months computer course certificate recognized by Government of Karnataka or by Society."

ಈ ಹಿನ್ನೆಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011 ರ ಷೆಡ್ಯೂಲ್-1ರಲ್ಲಿ ದ್ವಿತೀಯ ದರ್ಜೆ ಸಹಾಯಕರು ಕಮ್ ಕಂಪ್ಯೂಟರ್ ಆಪರೇಟರ್ ಹುದ್ದೆಗಳಿಗೆ ಪಿಯುಸಿ ವಿದ್ಯಾರ್ಹತೆಯನ್ನು ನಿಗಧಿಪಡಿಸಿ ಸರ್ಕಾರದಿಂದ ತಿದ್ದುಪಡಿ ಆದೇಶವನ್ನು ಪಡೆಯುವ ಬಗ್ಗೆ ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿತು. ಸರ್ಕಾರವು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನಿಗಧಿಪಡಿಸಿದ ಕನಿಷ್ಟ ವಿದ್ಯಾರ್ಹತೆಗೆ ಎಸ್.ಎಸ್.ಎಲ್.ಸಿ ಬದಲಾಗಿ ಪಿ.ಯು.ಸಿ. ವಿದ್ಯಾರ್ಹತೆಯನ್ನು ನಿಗಧಿಪಡಿಸಿದ್ದು, ಅದೇ ಮಾದರಿಯಲ್ಲಿ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿಯೂ ಕೂಡಾ ದ್ವಿತೀಯ ದರ್ಜೆಯ ಸಹಾಯಕರ ಹುದ್ದೆಗೆ ಪಿಯುಸಿ ವಿದ್ಯಾರ್ಹತೆಯೊಂದಿಗೆ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 6 ತಿಂಗಳ ಕಂಪ್ಯೂಟರ್ ಕೋರ್ಸ್ ಪೂರ್ಣಗಳಿಸಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರುವ ಮಾನದಂಡವನ್ನು ವಿಧಿಸಿ, ತತ್ಸಂಬಂಧವಾಗಿ ಸರ್ಕಾರದ ತಿದ್ದುಪಡಿ ಆದೇಶ ಪಡೆಯಲು ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 9</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯನ್ನು ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಕರ್ನಾಟಕ ಮಾರುಕಟ್ಟೆ ಮಹಾಮಂಡಳ ನಿಯಮಿತದ ಕಟ್ಟಡಕ್ಕೆ ಸ್ಥಳಾಂತರಿಸುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯನ್ನು ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಕಟ್ಟಡಕ್ಕೆ (6 ಮತ್ತು 7ನೇ ಮಹಡಿಗಳಗೆ) ಸ್ಥಳಾಂತರಿಸಲು ಮಾನ್ಯ ಅಧ್ಯಕ್ಷರು ಅನುಮತಿಸಿರುತ್ತಾರೆ.

ಸದರಿ 2 ಮಹಡಿಗಳ ಒಟ್ಟು ವಿಸ್ತೀರ್ಣ 6400 ಚ.ಅಡಿಗಳರುತ್ತದೆ. ಒಂದು ವೇಳೆ ಸಂಘದ ಕಾರ್ಯನಿರ್ವಹಣೆಗೆ ಈ ಸ್ಥಳಾವಕಾಶ ಕಡಿಮೆ ಎನಿಸಿದಲ್ಲಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತದ 3ನೇ ಬ್ಲಾಕ್‌ನಲ್ಲಿನ 2ನೇ ಮತ್ತು 4ನೇ ಮಹಡಿಯಲ್ಲಿಯೂ ಕೂಡಾ ಕ್ರಮವಾಗಿ 2400 ಚ.ಅಡಿ ಹಾಗೂ 3770 ಚ.ಅಡಿಗಳ ಸ್ಥಳಾವಕಾಸ ಲಭ್ಯವಿದೆ. ಅದನ್ನೂ ಸಹ ಸಂಘದ ಕಛೇರಿ ಉಪಯೋಗಕ್ಕೆ ಬಾಡಿಗೆ ಆಧಾರದ ಮೇಲೆ ನೀಡಲು ನೀಡಲು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವು ಸಿದ್ಧವಿದೆ. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿದೇಶಕರು, ದಿನಾಂಕ:07-09-2015 ರಂದು ಈ ಕಛೇರಿಗೆ ಪತ್ರ ಬರೆದು, ಕಟ್ಟಡಗಳನ್ನು ಈ ಕೆಳಕಂಡ ಷರತ್ತುಗಳ ಮೇಲೆ ಬಾಡಿಗೆಗೆ ನೀಡಲು ಒಪ್ಪಿರುತ್ತಾರೆ.

1. ಕಟ್ಟಡಗಳ ಬಾಡಿಗೆಯನ್ನು ಲೋಕೋಪಯೋಗಿ ಇಲಾಖೆಯು ಪ್ರತಿ ಚ.ಅಡಿಗೆ ರೂ.47.40 ಗಳನ್ನು ನಿಗಧಿಪಡಿಸಿದ್ದು, ನಿಗಧಿಪಡಿಸಿದ ದರಗಳನ್ವಯ ಬಾಡಿಗೆಗೆ ಕಟ್ಟಡವನ್ನು ನೀಡಲು ಒಪ್ಪಿರುತ್ತಾರೆ.
2. 10 ತಿಂಗಳ ಬಡ್ಡಿರಹಿತ ಬಾಡಿಗೆಯನ್ನು ಮುಂಗಡವಾಗಿ ನೀಡಲು ಕೋರಿರುತ್ತಾರೆ.
3. ಬಾಡಿಗೆಯನ್ನು ಪ್ರತಿ 11 ತಿಂಗಳ ನಂತರ ನವೀಕರಿಸಿ, ಶೇ.5ರಷ್ಟು ಹೆಚ್ಚಳ ಮಾಡಬೇಕೆಂದು ಹಾಗೂ ಅನ್ವಯವಾಗುವ ಸೇವಾ ತೆರಿಗೆ ಪಾವತಿಸುವ ಷರತ್ತು ವಿಧಿಸಿರುತ್ತಾರೆ.
4. ಬಾಡಿಗೆಯನ್ನು ಕಟ್ಟಡವನ್ನು ಸಂಘವು ವಶಕ್ಕೆ ಪಡೆದ ದಿನಾಂಕದಿಂದ ಅಥವಾ ಒಪ್ಪಂದದ ಕರಾರಿಗೆ ಸಹಿ ಮಾಡಿದ ದಿನಾಂಕದಿಂದ ಇದರಲ್ಲಿ ಯಾವುದು ಮೊದಲು ಆ ದಿನಾಂಕದಿಂದ ಪಾವತಿಸಬೇಕು.

ಪ್ರಸ್ತುತ ಸಂಘವು ಶೇಷಾದ್ರಿಪುರಂ 1ನೇ ಮುಖ್ಯ ರಸ್ತೆಯಲ್ಲಿರುವ ಕಟ್ಟಡ ಸಂಖ್ಯೆ:179, ರೂಪಾ ಕಾಂಪ್ಲೆಕ್ಸ್‌ನ 1ನೇ ಮಹಡಿಯ ಭಾಗಶ: 2 ಮತ್ತು 3ನೇ ಮಹಡಿಯ ಒಟ್ಟು 9400 ಚ.ಅಡಿಗಳ ವಿಸ್ತೀರ್ಣಕ್ಕೆ ಮಾಸಿಕ ಬಾಡಿಗೆ ರೂ. 3.27 ಲಕ್ಷಗಳನ್ನು ಪಾವತಿಸುತ್ತಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯನ್ನು ಕನ್ನಿಂಗ್‌ಹ್ಯಾಮ್ ರ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಕಟ್ಟಡಕ್ಕೆ ಸದರಿ ... ನಿಗಧಿಪಡಿಸಿದ ಷರತ್ತು ಮತ್ತು ಬಾಡಿಗೆಯನ್ನು ಒಪ್ಪಿ, ಸ್ಥಳಾಂತರಿಸಲು ಆಡಳಿತ ಮಂಡಳಿಯ ಮು... ಮಂಡಿಸಿ ಅನುಮೋದನೆ ಕೋರಿದೆ.

ತೀರ್ಮಾನ:

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಈ ಕೆಳಕಂಡ ಅಂಶಗಳ ಮೇಲೆ ನಿರ್ಣಯಿಸಲಾಯಿತು.**

1. **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯನ್ನು ಕರ್ನಾಟಕ ಮಹಾಮಂಡಳಿಯ ಕಟ್ಟಡಕ್ಕೆ ಸ್ಥಳಾಂತರಿಸಲು ಹಾಗೂ ಮಾಸಿಕ ಬಾಡಿಗೆ ಪ್ರತಿ ಚದುರ ಅಡಿಗೆ ರೂ.47.40 ರಂತೆ ಬಾಡಿಗೆ ಪಾವತಿಸಲು ಅನುಮೋದಿಸಿತು.**
2. **ಕರ್ನಾಟಕ ಮಹಾಮಂಡಳಕ್ಕೆ 10 ತಿಂಗಳ ಬಡ್ಡಿ ರಹಿತ ಮುಂಗಡ ಬಾಡಿಗೆಯನ್ನು ಪಾವತಿಸಲು ಅನುಮೋದಿಸಿತು.**
3. **ಬಾಡಿಗೆಯನ್ನು ಮಹಾಮಂಡಳದ ಷರತ್ತಿನಂತೆ, ಪ್ರತಿ 11 ತಿಂಗಳ ನಂತರ ಪಾವತಿಸಲಾಗುವ ಮಾಸಿಕ ಬಾಡಿಗೆಯ ಮೇಲೆ ಶೇ.5ರಷ್ಟು ಹೆಚ್ಚಿಸಿ ಪಾವತಿಸಲು ಅನುಮೋದಿಸಿತು.**
4. **ಆಡಳಿತ ಮಂಡಳಿಯು ಸಂಘದ ಪರವಾಗಿ ಮಹಾಮಂಡಳದೊಂದಿಗೆ ಒಪ್ಪಂದದ ಕರಾರಿಗೆ ಸಹಿ ಮಾಡಲು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರಿಗೆ ಅಧಿಕಾರ ನೀಡಲಾಯಿತು.**

ವಿಷಯ ಸಂಖ್ಯೆ: 10

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ವಿಶೇಷ ಪ್ರತಿಭಾ ಪುರಸ್ಕಾರ ನೀಡುವ ಬಗ್ಗೆ.

ರಾಜ್ಯ ಸರ್ಕಾರವು ಮೊರಾರ್ಜಿದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ವಸತಿ ಶಾಲೆಗಳನ್ನು ಪ.ಜಾತಿ, ಪ.ವರ್ಗ ಮತ್ತು ಹಿಂದುಳಿದ ವರ್ಗಗಳ ಗ್ರಾಮೀಣ ಪ್ರತಿಭಾವಂತ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿದ್ಯಾರ್ಥಿಗಳಿಗೆ ಗುಣಮಟ್ಟ ಶಿಕ್ಷಣ ನೀಡುವ ಉದ್ದೇಶದಿಂದಲೇ ಮಂಜೂರು ಮಾಡಿ, ಉಚಿತ ಊಟ, ವಸತಿ, ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳು, ಉಚಿತ ಶೈಕ್ಷಣಿಕ ಸವಲತ್ತುಗಳನ್ನು ಕಲ್ಪಿಸಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ವಸತಿ ಶಾಲೆಗಳ ನಿರ್ವಹಣೆ ಮಾಡುತ್ತಿದೆ.

2015ರ ಏಪ್ರಿಲ್ ಮಾಹೆಯಲ್ಲಿ ಒಟ್ಟು 461 ವಸತಿ ಶಾಲೆಗಳು ಎಸ್.ಎಸ್.ಎಲ್.ಸಿ ಹಂತವನ್ನು ತಲುಪಿದ್ದು, ಈ ವಸತಿ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಒಟ್ಟು 17538 ವಿದ್ಯಾರ್ಥಿಗಳು ಹಾಜರಾಗಿದ್ದು, 17049 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಈ ಪೈಕಿ A+ (90% and above) ಶ್ರೇಣಿಯಲ್ಲಿ 751 (ಬಾಲಕ-351 ಮತ್ತು ಬಾಲಕಿ-400)ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಸದರಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಉತ್ತೇಜನ ನೀಡುವ ಸಲುವಾಗಿ ದಿನಾಂಕ:03-09-2015 ರಂದು ನಡೆದ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರುಗಳು ಪ್ರೋತ್ಸಾಹ ಧನ ಯೋಜನೆ ರೂಪಿಸುವಂತೆ, ತಿಳಿಸಿರುತ್ತಾರೆ.

ಪ್ರಸ್ತುತ ಸಂಘದ ಆಡಳಿತ ಮಂಡಳಿ ಅನುಮೋದನೆಯಂತೆ, ಆಯಾ ವರ್ಗಗಳ ವಸತಿ ಶಾಲೆಗಳಲ್ಲಿ ಎಸ್.ಎಸ್. ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ, 6 ಜನ ವಿದ್ಯಾರ್ಥಿಗಳಿಗೆ (ಬಾಲಕ-3 ಮತ್ತು ಬಾಲಕಿ-3) ರೂ.5000/- ಗಳ ಪ್ರೋತ್ಸಾಹ ಧನವನ್ನು ಡಿ.ದೇವರಾಜು ಅರಸು ಜನ್ಮ ದಿನಾಚರಣೆ ಹಾಗೂ ವಾಲ್ಮೀಕಿ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಮಾಜ ಕಲ್ಯಾಣ ಸಚಿವರ ಸಮ್ಮುಖದಲ್ಲಿ ಪ್ರತಿಭಾ ಪುರಷ್ಕಾರ ಮಾಡಲಾಗುತ್ತಿದೆ.

ಪ್ರಸ್ತುತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿ ಶಾಲೆಗಳಲ್ಲಿ ಒಟ್ಟು 751 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು, A+ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಸದರಿ ವಿದ್ಯಾರ್ಥಿಗಳಿಗೆ ವಿಶೇಷ ಪ್ರತಿಭಾ ಪುರಸ್ಕಾರವನ್ನು ನೀಡಿ, ರೂ.10000/-ಗಳ ಪ್ರೋತ್ಸಾಹ ಧನ ನೀಡಿದಲ್ಲಿ ಒಟ್ಟು ರೂ. 7,51,000/- ಗಳ ವೆಚ್ಚ ಭರಿಸಬೇಕಾಗುತ್ತದೆ. ಈ ಮೊತ್ತವನ್ನು ಆಯಾ ವರ್ಗಗಳ ವಸತಿ ಶಾಲೆಗಳ ನಿರ್ವಹಣಾ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವೆಚ್ಚ ದಲ್ಲಿ ಭರಿಸಬೇಕಾಗಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಆರ್ಥಿಕ ಇಲಾಖೆಯ ಅನುಮೋದನೆ ಪಡೆದು ಯೋಜನೆ ರೂಪಿಸುವ ಬಗ್ಗೆ ಆಡಳಿತ ಮಂಡಳಿ ಸಭೆಯ ಅನುಮೋದನೆ ಕೋರಿದೆ.

ತೀರ್ಮಾನ:

1. ಆಡಳಿತ ಮಂಡಳಿಯ ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಹಾಜರಿದ್ದ ಶ್ರೀ.ಇ.ವೆಂಕಟಯ್ಯ ಐ.ಎ.ಎಸ್(ನಿವೃತ್ತ), ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಸಲಹೆಗಾರರು ಹಾಗೂ ನಿವೃತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರು. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕಗಳಿಸಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ರೂ,.7000/-ಗಳ ಪ್ರೋತ್ಸಾಹ ಧನವನ್ನು ಹಾಗೂ ಈ ವರ್ಗಗಳ ವಿದ್ಯಾರ್ಥಿಗಳು ಶೇ.75%ಕ್ಕಿಂತ ಹೆಚ್ಚಿನ ಅಂಕಗಳಿಸಿದ್ದಲ್ಲಿ ರೂ.15,000/-ಗಳ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮ ಸಮಾಜ ಕಲ್ಯಾಣ ಇಲಾಖೆಯಲ್ಲಿ ಚಾಲ್ತಿಯಲ್ಲಿರುವುದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಸಂಘದಿಂದ ಪ್ರತ್ಯೇಕವಾಗಿ ಪ್ರೋತ್ಸಾಹ ಧನ ನೀಡುವುದು ಅಗತ್ಯವಿಲ್ಲವೆಂದು ತಿಳಿಸಿದರು.
2. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಪ.ಜಾತಿ/ಪ.ವರ್ಗ/ಹಿಂ.ವರ್ಗಗಳ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು, A+ ಶ್ರೇಣಿಯಲ್ಲಿ ಮೊದಲನೇ ಬಾರಿಗೆ(First Attempt) ಉತ್ತೀರ್ಣರಾದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಹಾಗೂ ಅನುಷ್ಟಾನಗೊಳಿಸಲು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಆಢಳಿತ ಮಂಡಳಿಯು ತೀರ್ಮಾನಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ: 11

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಸರಬರಾಜು ಮಾಡಲು Tender Scrutiny committee ಯನ್ನು ರಚಿಸಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2015-16ನೆ ಸಾಲಿಗೆ ಸಂಘದ ಅಧೀನದಲ್ಲಿರುವ ವಸತಿ ಶಾಲೆ/ಕಾಲೇಜುಗಳಿಗೆ ಪೀಠೋಪಕರಣ, ಬೆಂಚು ಡೆಸ್ಕ್, ಟೂ-ಟಯರ್ ಕಾಟ್, ಸೋಲಾರ್ ಉಪಕರಣಗಳ ಖರೀದಿಗೆ ದಿನಾಂಕ:21-10-2015 ರಂದು ಇ-ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಬಾಕಿ ಉಳಿದ ಸಾಮಾಗ್ರಿಗಳಾದ ಪ್ರಯೋಗಾಲಯ ಉಪಕರಣಗಳು, ಪಾಠೋಪಕರಣಗಳು ಮತ್ತು ಪಾತ್ರೆಗಳ ಖರೀದಿಗಾಗಿ ಇ-ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲು ಕ್ರಮವಹಿಸಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರಡಿ ಕಲಂ 10ರಡಿ ಅಧಿಕಾರಿಗಳ ಸದಸ್ಯತ್ವ ಹೊಂದಿದ ಟೆಂಡರ್ ಪರಿಶೀಲನಾ ಸಮಿತಿ ಹಾಗೂ ಟೆಂಡರ್ ಅನುಮೋದನಾ ಸಮಿತಿಯನ್ನು ರಚಿಸಬೇಕಾಗಿದೆ.

ಪ್ರಸ್ತುತ ಕಾಮಗಾರಿಗಳ ಟೆಂಡರ್‌ಗಳಿಗೆ ಸಂಬಂಧಿಸಿದಂತೆ, ಟೆಂಡರ್ ಪರಿಶೀಲನಾ ಮತ್ತು ಟೆಂಡರ್ ಅನುಮೋದನಾ ಸಮಿತಿಗಳನ್ನು ರಚಿಸಲಾಗಿದೆ. ಆದರೆ, ಮೇಲ್ಕಂಡ ಮೂಲಭೂತ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಷರತ್ತುಗಳ ಅನ್ವಯ ತಾಂತ್ರಿಕ ಮತ್ತು ಆರ್ಥಿಕ ಮಾಹಿತಿಗಳನ್ನು ಪರಿಶೀಲಿಸಲು ಮಾನ್ಯ ಸಂಘದ ಅಧ್ಯಕ್ಷರ ಅನುಮೋದನೆ ಮೇರೆಗೆ Tender Scrutiny committee ಈ ಕೆಳಕಂಡಂತಿರುತ್ತದೆ.

| | | | |
|---|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | : | ಅಧ್ಯಕ್ಷರು |
| 2. | ಸಮಾಜ ಕಲ್ಯಾಣ ಇಲಾಖೆ, ಆಯುಕ್ತರು | : | ಸದಸ್ಯರು |
| 3. | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರು | : | ಸದಸ್ಯರು |
| 4. | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕರು | : | ಸದಸ್ಯರು |
| 5. | ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರು | : | ಸದಸ್ಯರು |
| 6. | ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ /ನಿರ್ದೇಶಕರು | : | ಸದಸ್ಯರು |
| 7. | ಉಪ ಕಾರ್ಯದರ್ಶಿಗಳು ಆಂತರಿಕ ಆರ್ಥಿಕ ಸಲಹೆಗಾರರು | : | ಸದಸ್ಯರು |
| 8. | ಕಾರ್ಯನಿರ್ವಾಹಕ ನಿರ್ದೇಶಕರು, ಕವಶಿಸಸ | : | ಸದಸ್ಯ ಕಾರ್ಯದರ್ಶಿ |

ಈ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ~~ವಿಷಯದಲ್ಲಿ ಪ್ರಸ್ತಾಪಿಸಿದ~~ ಟೆಂಡರ್ ಪರಿಶೀಲನಾ ಸಮಿತಿಯ ಸದಸ್ಯರುಗಳನ್ನು ಈ ಕೆಳಕಂಡಂತೆ ಮಾರ್ಪಡಿಸಿ ಅನುಮೋದಿಸಿತು.**

| | | | |
|---|---|---|---|
| 1. | ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು | : | ಅಧ್ಯಕ್ಷರು |
| 2. | ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | : | ಸದಸ್ಯರು |
| 3. | ಜಂಟಿ ನಿರ್ದೇಶಕರು<br>ಸಮಾಜ ಕಲ್ಯಾಣ ಇಲಾಖೆ,<br>(ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರು ನಾಮನಿರ್ದೇಶನ ಮಾಡುವ) | : | ಸದಸ್ಯರು |
| 4. | ಜಂಟಿ ನಿರ್ದೇಶಕರು<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,<br>(ಆಯುಕ್ತರು, ಹಿಂದುಳಿದ ಕಲ್ಯಾಣ ಇಲಾಖೆರವರು ನಾಮನಿರ್ದೇಶನ ಮಾಡುವ) | : | ಸದಸ್ಯರು |
| 5. | ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ,<br>(ಆಯುಕ್ತರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆರವರು ನಾಮನಿರ್ದೇಶನ ಮಾಡುವ) | : | ಸದಸ್ಯರು |
| 6. | ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ವ್ಯವಸ್ಥಾಪಕ ನಿರ್ದೇಶಕರು ನಾಮ ನಿರ್ದೇಶಿಸುವ ಹಿರಿಯ ಅಧಿಕಾರಿಗಳು. | | ಸದಸ್ಯರು |
| 7. | ಉಪ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ಆಂತರಿಕ ಆರ್ಥಿಕ ಸಲಹೆಗಾರರು(ಕಲ್ಯಾಣ) | : | ಸದಸ್ಯರು |
| 8. | ಅಧೀಕ್ಷಕ ಅಭಿಯಂತರರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ | : | ಸದಸ್ಯರು |
| 9. | ಜಂಟಿ ನಿರ್ದೇಶಕರು(ಆಡಳಿತ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ | : | ಸದಸ್ಯ ಕಾರ್ಯದರ್ಶಿ |

<u>ವಿಷಯ ಸಂಖ್ಯೆ: 12</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆ/ ಕಾಲೇಜುಗಳಿಗೆ ಮೆ॥ ಕಿಯೋನಿಕ್ಸ್ ಸಂಸ್ಥೆಯಿಂದ ಸರಬರಾಜಾಗಿರುವ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು 3rd **Party Inspection** ಮಾಡಿಸಲು ತಗಲುವ ವೆಚ್ಚವನ್ನು ಭರಿಸುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಘವು 62ನೇ ಆಡಳಿತ ಮಂಡಳಿಯ ತೀರ್ಮಾನದಂತೆ 280 ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆಗಳಿಗೆ ಮೆ॥ ಕಿಯೋನಿಕ್ಸ್ ಸಂಸ್ಥೆಯಿಂದ 892 ಕಂಪ್ಯೂಟರ್‌ಗಳು ಮತ್ತು 280 ಪ್ರಿಂಟರ್‌ಗಳನ್ನು ಸರಬರಾಜು ಮಾಡಿದೆ. ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999ರ ಅನ್ವಯ ಸರಬರಾಜು ಆದ ಸಾಮಾಗ್ರಿಗಳನ್ನು **3rd Party** ರವರಿಂದ ತಪಾಸಣೆ ಮಾಡಿಸುವುದು ಅಗತ್ಯವಾಗಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಆರ್ಥಿಕ ಇಲಾಖೆಯು ವಿದ್ಯುನ್ಮಾನ ಉಪಕರಣಗಳಾದ ಕಂಪ್ಯೂಟರ್, ಪ್ರಿಂಟರ್, ಇತ್ಯಾದಿ ಸಾಮಾಗ್ರಿಗಳನ್ನು ಖರೀದಿಸಿದಲ್ಲಿ ಮೆ॥ ನಿಸಾಕಿ ಟೆಕ್ನಾಲಜಿ ಸರ್ವಿಸ್ ಬೆಂಗಳೂರು ರವರಿಂದ ತಪಾಸಣೆ ಮಾಡಿಸಲು ಹಾಗೂ ಅವರಿಗೆ ಆರ್ಥಿಕ ಇಲಾಖೆಯು ನಿಗಧಿಪಡಿಸಿದ ದರದಲ್ಲಿ ಶುಲ್ಕ ಪಾವತಿಸಲು ತನ್ನ ಆದೇಶ ಸಂಖ್ಯೆ: FD 55 PED Call 2004.Bangalore, Date:17.02.2005 ರಲ್ಲಿ ತಿಳಿಸಿದೆ. ಈ ಆದೇಶದನ್ವಯ ಬೆಂಗಳೂರಿನ ಹೊರಭಾಗಕ್ಕೆ ಸರಬರಾಜು ಆದ ಪ್ರತಿ ಕಂಪ್ಯೂಟರ್‌ಗಳು ಮತ್ತು ಪ್ರಿಂಟರ್‌ಗಳ ತಪಾಸಣೆಗೆ ಕ್ರಮವಾಗಿ, ತಲಾ ರೂ.400/- ಹಾಗೂ ರೂ.250/-ಗಳನ್ನು ನಿಗಧಿಪಡಿಸಿದೆ. 892 ಕಂಪ್ಯೂಟರ್ ಹಾಗೂ 280 ಪ್ರಿಂಟರ್‌ಗಳ ತಪಾಸಣೆ ಮೂರನೇ ವ್ಯಕ್ತಿಯಿಂದ ತಪಾಸಣೆಗೊಳಿಸಿ ಮುಂದಿನ ಕ್ರಮಕ್ಕೈಗೊಳ್ಳಬೇಕಿರುತ್ತದೆ. ಮೆ॥ ನಿಸಾಕಿ ಟೆಕ್ನಾಲಜಿ ಸರ್ವಿಸ್ ಬೆಂಗಳೂರು ಇವರಿಗೆ ಪಾವತಿಸಬೇಕಾದ ಶುಲ್ಕದ ವಿವರಗಳು ಈ ಕೆಳಕಂಡಂತೆ ಇವೆ.

1. ಕಂಪ್ಯೂಟರ್ಸ್ – (892 Computers XRs.400) = Rs.3,56,800/-
2. ಪ್ರಿಂಟರ್ಸ್ – (280 Printers XRs.250) = Rs.70,000/-

ಒಟ್ಟು Rs.4,26,800/-

ಮೆ॥ ಕಿಯೋನಿಕ್ಸ್ ಸಂಸ್ಥೆಯಿಂದ ಸರಬರಾಜು ಆಗುವ ಕಂಪ್ಯೂಟರ್ ಮತ್ತು ಪ್ರಿಂಟರ್ಸ್‌ಗಳ 3rd Party ತಪಾಸಣೆಗೆ ಮೆ॥ ನಿಸಾಕಿ ಟೆಕ್ನಾಲಜಿ ಸರ್ವಿಸ್ ಬೆಂಗಳೂರು ಇವರಿಗೆ ಆರ್ಥಿಕ ಇಲಾಖೆಯು ನಿಗಧಿಪಡಿಸಿದ ದರ ಮತ್ತು ಷರತ್ತುಗಳಿಗೆ ಒಳಪಟ್ಟು ವಹಿಸಲಾಗಿದೆ.

ವಿಷಯವನ್ನು ಅವಗಾಹನೆಗೆ ಮಂಡಿಸುತ್ತಾ, ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಮೆ॥ ಕಿಯೋನಿಕ್ಸ್ ಸಂಸ್ಥೆಯಿಂದ ಸರಬರಾಜು ಆಗಿರುವ/ಅಗುವ ಕಂಪ್ಯೂಟರ್ ಮತ್ತು ಪ್ರಿಂಟರ್ಸ್‌ಗಳನ್ನು ಮೆ॥ ನಿಸಾಕಿ ಟೆಕ್ನಾಲಜಿ ಸರ್ವಿಸ್ ಬೆಂಗಳೂರು ಇವರಿಗೆ ಆರ್ಥಿಕ ಇಲಾಖೆಯು ಅನುಮೋದಿಸಿದ ದರ ಮತ್ತು ಷರತ್ತುಗಳಿಗೆ ಒಳಪಟ್ಟು 3rd Party ತಪಾಸಣೆಗೆ ವಹಿಸಲು ಅನುಮೋದಿಸಿತು ಹಾಗೂ ಸದರಿ ಸಂಸ್ಥೆಯ ವರದಿಯನ್ನು ಪಡೆದ ನಂತರ ಖರೀದಿ ಬಾಬ್ತು ವೆಚ್ಚವನ್ನು ಮೆ॥ ಕಿಯೋನಿಕ್ಸ್ ಸಂಸ್ಥೆಗೆ ಪಾವತಿಸಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 13**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಉನ್ನತ ವ್ಯಾಸಂಗಕ್ಕೆ ಅನುಮತಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ 14 ಪ್ರಾಂಶುಪಾಲರು/ ಬೋಧಕ/ ಬೋಧಕೇತರ ಸಿಬ್ಬಂದಿಗಳು ಅವರುಗಳ ಹೆಸರಿನ ಮುಂದೆ ತೋರಿಸಿದ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಲು ಕೋರಿರುತ್ತಾರೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| ಕ್ರ. ಸಂ | ಸಿಬ್ಬಂದಿಯ ಹೆಸರು ಮತ್ತು ಪದನಾಮ | ಕರ್ತವ್ಯ ನಿರ್ವಹಿಸುತ್ತಿರುವ ವಸತಿ ಶಾಲೆ | ಉನ್ನತ ವ್ಯಾಸಂಗದ ವಿವರ |
|---|---|---|---|
| 1 | ಶ್ಯಾಮರಾಯ ಅರವತ್ತು, ಕನ್ನಡ ಭಾಷಾ ಶಿಕ್ಷಕರು | ಮೊ.ದೇ.ವ.ಶಾಲೆ, ಸಾವಳೇಶ್ವರ, ಆಳಂದ ತಾ, ಕಲಬುರಗಿ ಜಿಲ್ಲೆ. | ಪಿ.ಹೆಚ್.ಡಿ (ಅರೆಕಾಲಿಕ) |
| 2 | ಲಿಂಗರಾಜು.ವಿ.ಎನ್, ದೈಹಿಕ ಶಿಕ್ಷಣ ಶಿಕ್ಷಕರು | ಕಿ.ರಾ.ಚೆ.ವ.ಶಾಲೆ, ಚಿಕ್ಕೋನಹಳ್ಳಿ, ನಾಗಮಂಗಲ ತಾ, ಮಂಡ್ಯ ಜಿಲ್ಲೆ | ಪಿ.ಹೆಚ್.ಡಿ(ಅಂಚೆ &ತೆರಪಿನ ಶಿಕ್ಷಣ) |
| 3 | ಶ್ರೀಧರ.ಎಂ, ಪ್ರಾಂಶುಪಾಲರು | ಮೊ.ದೇ.ವ.ಶಾಲೆ, ಇಟ್ಟಗಿ, ಹಡಗಲಿ ತಾ, ಬಳ್ಳಾರಿ ಜಿಲ್ಲೆ, | ಪಿ.ಹೆಚ್.ಡಿ (ಅರೆಕಾಲಿಕ) |
| 4 | ಆದಯ್ಯ ಹಿರೇಮಠ, ನಿಲಯಪಾಲಕರು (ಸದರಿಯವರು ಅಮಾನತುಗೊಂಡಿದ್ದು, ವಿಚಾರಣೆ ಕಾಯ್ದಿರಿಸಿ, ಅಮಾನತು ಆದೇಶವನ್ನು ತೆರವುಗೊಳಿಸಿದ್ದು, ಸದರಿ ವಸತಿ ಶಾಲೆಯಲ್ಲಿ | ಮೊ.ದೇ.ವ.ಶಾಲೆ, ನೆಲೋಗಿ, ಜೇವರ್ಗಿ ತಾ, ಕಲಬುರಗಿ ಜಿಲೆ, | ಪಿ.ಹೆಚ್.ಡಿ (ಅರೆಕಾಲಿಕ) |
| 5 | ರಾಜು.ಪಿ, ಪ್ರಾಂಶುಪಾಲರು | ಮೊ.ದೇ.ವ.ಶಾಲೆ,ಹನೂರು, ಕೊಳ್ಳೇಗಾಲ ತಾ, ಚಾಮರಾಜನಗರ ಜಿಲ್ಲೆ. | ಪಿ.ಹೆಚ್.ಡಿ (ಅರೆಕಾಲಿಕ) |
| 6 | ಸುಪ್ರಿಯ ಟಿ.ಪಿ, ಕಂಪ್ಯೂಟರ್ ಶಿಕ್ಷಕರು. | ಕಿ.ರಾ.ಚೆ.ವ.ಶಾಲೆ, ಹಂಗರಹಳ್ಳಿ, ಹೊಳೆನರಸೀಪುರ ತಾ, ಹಾಸನ ಜಿಲ್ಲೆ | ಸ್ನಾತಕೋತ್ತರ ಪದವಿ (ಕಂಪ್ಯೂಟರ್ ವಿಜ್ಞಾನ) |
| 7 | ಕಿರಣ್‌ಶಂಕರ್.ಎ.ಜಿ, ಕಂಪ್ಯೂಟರ್ ಶಿಕ್ಷಕರು. | ಕಿ.ರಾ.ಚೆ.ವ.ಶಾಲೆ, ಚಿಕ್ಕಾರೆಹಳ್ಳಿ, ಅರಸೀಕೆರೆ ತಾ, ಹಾಸನ ಜಿಲ್ಲೆ | ಸ್ನಾತಕೋತ್ತರ ಪದವಿ (ಕಂಪ್ಯೂಟರ್ ವಿಜ್ಞಾನ) |
| 8 | ನಾಗರಾಜ.ಸಿ.ಹಳಗೋಧಿ, ನಿಲಯಪಾಲಕರು. | ಕಿ.ರಾ.ಚೆ.ವ.ಶಾಲೆ, ಅಫಜಲಪೂರ, ಕಲಬುರಗಿ ಜಿಲ್ಲೆ | ಪಿ.ಹೆಚ್.ಡಿ (ಅರೆಕಾಲಿಕ) |
| 9 | ಧರ್ಮರಾಜ್ ಕಟ್ಟಿಮನಿ, ಹಿಂದಿ ಭಾಷಾ ಶಿಕ್ಷಕರು | ಮೊ.ದೇ.ವ.ಶಾಲೆ, ಹೊಸೂರು, ಶಿಕಾರಿಘುರ ತಾ.ಶಿವಮೊಗ್ಗಜಿಲ್ಲೆ. | ಸ್ನಾತಕೋತ್ತರ ಪದವಿ (ಎಂ.ಎ) |
| 10 | ಭಾರತಿ ಒ.ಬಿ, ದೈಹಿಕ ಶಿಕ್ಷಣ ಶಿಕ್ಷಕರು | ಮೊ.ದೇ.ವ.ಶಾಲೆ, ಹೊಸೂರು, ಶಿಕಾರಿಪುರ ತಾ.ಶಿವಮೊಗ್ಗಜಿಲ್ಲೆ. | ಸ್ನಾತಕೋತ್ತರ ಪದವಿ (ಎಂ.ಎ) |
| 11 | ಮಂಜುನಾಥವಿಮಣ್ಣೂರು, ದೈಹಿಕ ಶಿಕ್ಷಣ ಶಿಕ್ಷಕರು | ಕಿ.ರಾ.ಚೆ.ವ.ಶಾಲೆ, ಮಾದಾಪುರ, ಸವಣೂರು ತಾ, ಹಾವೇರಿ ಜಿಲ್ಲೆ | ಪಿ.ಹೆಚ್.ಡಿ (ಬಾಹ್ಯವಾಗಿ) |
| 12 | ಭಾಗ್ಯಮ್ಮ, ಕನ್ನಡ ಭಾಷಾ ಶಿಕ್ಷಕರು | ಮೊ.ದೇ.ವ.ಶಾಲೆ, ಹುಲಿಕಟ್ಟೆ, ಮಾಗಡಿ ತಾ, ರಾಮನಗರ ಜಿಲ್ಲೆ | ಪಿ.ಹೆಚ್.ಡಿ (ಅರೆಕಾಲಿಕ) |
| 13 | ಸುಮಲತ ಜಿ.ಎನ್, ದೈಹಿಕ ಶಿಕ್ಷಣ ಶಿಕ್ಷಕರು | ಕಿ.ರಾ.ಚೆ.ವ.ಶಾಲೆ, ಹೇರೂರು, ಗುಬ್ಬಿ ತಾ, ತುಮಕೂರು ಜಿಲ್ಲೆ | ಎಂ.ಪಿ.ಇಡಿ(ವೇತನಸಹಿತ/ರಹಿತ ರಜೆ) |
| 14 | ರಮೇಶ.ನಿ.ಬಸಾಪುರಿ, ಕಂಪ್ಯೂಟರ್ ಶಿಕ್ಷಕರು. | ಸಂಗೊಳ್ಳಿರಾಯಣ್ಣ ಸ್ಮಾರಕ ಸನಿವಾಸ ಶಾಲೆ, ನಂದಗಡ, ಬೆಳಗಾವಿ ಜಿಲ್ಲೆ. | ಎಂ.ಸಿ.ಎ(ವೇತನ ಸಹಿತ/ ರಹಿತ ರಜೆ) |

ಈ ಪೈಕಿ ಕ್ರಮ ಸಂಖ್ಯೆ 01ರಿಂದ 12ರವರೆಗಿನ ಬೋಧಕ ಸಿಬ್ಬಂದಿಗಳು ವಸತಿ ಶಾಲೆಯ ಬೋಧನಾ ಅವಧಿಗೆ ಧಕ್ಕೆ ಬಾರದಂತೆ ವ್ಯಾಸಂಗ ಮಾಡಲು ಅನುಮತಿ ನೀಡಲು ಕೋರಿರುತ್ತಾರೆ.

ಕ್ರಮ ಸಂಖ್ಯೆ 13ರಿಂದ 14ರವರೆಗಿನ ಬೋಧಕ ಸಿಬ್ಬಂದಿಗಳು ಅವರುಗಳ ಹೆಸರಿನ ಮುಂದೆ ತೋರಿಸಿದ ವಿದ್ಯಾಭ್ಯಾಸವು ಕುಂಠಿತವಾಗಿದ್ದು, ಮುಂದುವರೆಸಲು ಉನ್ನತ ವ್ಯಾಸಂಗದ ರಜೆಯನ್ನು ವೇತನ ಸಹಿತ/ ರಹಿತವಾಗಿ ಮಂಜೂರು ಮಾಡಿ, ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಲು ಕೋರಿರುತ್ತಾರೆ.

ಉನ್ನತ ವಿದ್ಯಾಭ್ಯಾಸ/ವಿಶೇಷ ತರಬೇತಿ ಪಡೆಯಲು ವ್ಯಾಸಂಗ ರಜೆಯ ಮಂಜೂರಾತಿ ಕುರಿತಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಪರಿಶಿಷ್ಟ–II 'ಎ' ರಡಿ ಯಾವುದೇ ಸರ್ಕಾರಿ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ನೌಕರನು 5 ವರ್ಷಗಳಿಗಿಂತ ಕಡಿಮೆಯಿಲ್ಲದೇ ಸೇವೆ ಸಲ್ಲಿಸಿದ್ದು, 48 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವನಾಗಿದ್ದರೆ, ಆ ಸರ್ಕಾರಿ ನೌಕರನಿಗೆ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡುವ ಮೊದಲು ಆ' ಸಿಬ್ಬಂದಿಯು ತನ್ನ ಕರ್ತವ್ಯಕ್ಕೆ ಸಂಬಂಧಿಸಿದ ಅಥವಾ ತನ್ನ ಕರ್ತವ್ಯಕ್ಕೆ ಅತ್ಯಂತ ನಿಕಟ ವ್ಯಾಪ್ತಿ ಹೊಂದಿರುವ ವೃತ್ತಿಯ ಅಥವಾ ತಾಂತ್ರಿಕ ವಿಷಯದಲ್ಲಿ ಉನ್ನತ ವ್ಯಾಸಂಗ ಅಥವಾ ವಿಶಿಷ್ಟ ತರಬೇತಿ ಶಿಕ್ಷಣದ ವಿಶೇಷ ಅಧ್ಯಯನದ ವ್ಯಾಸಂಗಕ್ಕಾಗಿ ಪ್ರತಿನಿಯೋಜನೆ ಮೇಲೆ ಕಳುಹಿಸಿಕೊಡಬಹುದೆಂದು ಉಲ್ಲೇಖಿಸಲಾಗಿದೆ ಹಾಗೂ ಇತರೇ ಷರತ್ತುಗಳನ್ನು ಸಹ ಮೇಲಿನ ನಿಯಮಗಳಲ್ಲಿ ಹೇಳಲಾಗಿದೆ.

ಪ್ರಮುಖವಾಗಿ ವ್ಯಾಸಂಗ ರಜೆ ಮಂಜೂರಾತಿಗೆ ಪರಿಶಿಷ್ಟ-II (3) ರಡಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ:-

1. ಸರ್ಕಾರದಲ್ಲಿ ಐದು ವರ್ಷಗಳಿಗಿಂತ ಕಡಿಮೆ ಕ್ರಮಬದ್ಧ ಸೇವೆಯನ್ನು ಸಲ್ಲಿಸಿದ್ದರೆ, ಯಾವುದೇ ವ್ಯಾಸಂಗ ರಜೆಯನ್ನು ಸಾಮಾನ್ಯವಾಗಿ ಮಂಜೂರು ಮಾಡತಕ್ಕುದಲ್ಲ. ಪ್ರೊಬೇಷನ್ ಅವಧಿಯನ್ನು ಪೂರ್ಣಗೊಳಿಸದ ಸರ್ಕಾರಿ ನೌಕರನಿಗೆ, ಯಾವುದೇ ಸಂದರ್ಭದಲ್ಲೂ ವ್ಯಾಸಂಗ ರಜೆಯನ್ನು ಮಂಜೂರು ಮಾಡತಕ್ಕುದಲ್ಲ.
2. ವ್ಯಾಸಂಗ ರಜೆಯ ಗರಿಷ್ಠ ಅವಧಿಯನ್ನು ಡಾಕ್ಟರೇಟ್ ಪದವಿಗಳಿಗೆ ಮೂರು ವರ್ಷಗಳಿಗೆ ಮತ್ತು ಸ್ನಾತಕೋತ್ತರ ಅಥವಾ ಇತರೆ ಉನ್ನತ ವ್ಯಾಸಂಗಗಳಿಗೆ ಎರಡು ವರ್ಷಗಳಿಗೆ ನಿರ್ಬಂಧಿಸತಕ್ಕುದು.
3. ವ್ಯಾಸಂಗ ರಜೆಯ ಅವಧಿಯನ್ನು ಸರ್ಕಾರಿ ನೌಕರನ ರಜಾ ಲೆಕ್ಕಕ್ಕೆ ಜಮೆ ಮಾಡತಕ್ಕದು. ಸರ್ಕಾರಿ ನೌಕರನ ಲೆಕ್ಕದಲ್ಲಿರುವ ಗಳಿಕೆ ರಜೆ/ ಅರ್ಧವೇತನ ರಜೆಗಳು ಕಡಿಮೆಯಾದರೆ ಉಳಿದ ಅವಧಿಯನ್ನು ಅಸಾಧಾರಣ ರಜೆ ಎಂದು ಪರಿಗಣಿಸತಕ್ಕುದು. ವ್ಯಾಸಂಗ ರಜೆಯ ಅವಧಿಯಲ್ಲಿ ನಿಯಮಗಳ ಮೇರೆಗೆ ಸರ್ಕಾರಿ ನೌಕರನು ಲಭ್ಯವಾಗುವ ರಜಾವೇತನಕ್ಕೆ ಅರ್ಹನಾಗಿರತಕ್ಕದ್ದು.
4. ವ್ಯಾಸಂಗ ರಜೆಯು ಮಂಜೂರಾಗಿರುವ ಸರ್ಕಾರಿ ನೌಕರನು ವ್ಯಾಸಂಗ ರಜೆಯ ಅವಧಿಯಲ್ಲಾಗಲೀ ಅಥವಾ ವ್ಯಾಸಂಗ ರಜೆಯು ಮುಕ್ತಾಯವಾದ ನಂತರ ಕರ್ತವ್ಯಗಳಿಗೆ ಹಾಜರಾದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗಾಗಲೀ ನಿವೃತ್ತಿ ಹೊಂದಲು ಅವನಿಗೆ ಯಾವುದೇ ಅವಕಾಶವಿರುವುದಿಲ್ಲ.

ಮುಂದುವರೆದು, ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 04 ಸನಿತಿ 2012ರನ್ವಯ ಯಾವುದೇ ನೌಕರನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಪರಿಶಿಷ್ಟ-II 'ಎ'ನಲ್ಲಿನ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಷರತ್ತುಗಳನ್ನು ಪೂರೈಸಿದ್ದಲ್ಲಿ, ಉನ್ನತ ವ್ಯಾಸಂಗಕ್ಕೆ ಇಲಾಖಾ ಕಾರ್ಯದರ್ಶಿಗಳ ಶಿಫಾರಸ್ಸಿನೊಂದಿಗೆ ಆರ್ಥಿಕ ಇಲಾಖೆಯ ಪೂರ್ವಾನುಮೋದನೆ ಅಗತ್ಯವೆಂದು ತಿಳಿಸಲಾಗಿದೆ

ಮೇಲೆ ಹೇಳಲಾದ 14 ಪ್ರಾಂಶುಪಾಲರು/ ಬೋಧಕ/ ಬೋಧಕೇತರ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿದ್ದರಿಂದ ನೇಮಕಾತಿಯಲ್ಲಿ ಆಯ್ಕೆಗೊಂಡಿರುತ್ತಾರೆ.

ಮೇಲ್ಕಂಡ 14 ಖಾಯಂ ಸಿಬ್ಬಂದಿಗಳು ವಸತಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರುಗಳು ಬಯಸಿದ ಉನ್ನತ ವ್ಯಾಸಂಗದ ಪದವಿಯು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಿಗೆ ಅಗತ್ಯವಿರುವುದಿಲ್ಲ. ಆಡಳಿತ ಮಂಡಳಿಯು ಉದ್ದೇಶಿಸಿದ್ದಲ್ಲಿ 14 ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಉನ್ನತ ವ್ಯಾಸಂಗಕ್ಕೆ ಅನುಮೋದಿಸುವ ಬಗ್ಗೆ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ ತೀರ್ಮಾನ ಕೋರಿದೆ.

**<u>ತೀರ್ಮಾನ:</u>**

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿತು. ಪ್ರಸ್ತಾಪಿಸಿದ ಖಾಯಂ ಸಿಬ್ಬಂದಿಗಳಿಗೆ ಉನ್ನತ ವ್ಯಾಸಂಗಕ್ಕೆ ಅನುಮತಿಸಿದಲ್ಲಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯುಂಟಾಗುವುದನ್ನು ಮನಗಂಡು, ಸಿಬ್ಬಂದಿಗಳು, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯುಂಟಾಗದಂತೆ, ಉನ್ನತ ವ್ಯಾಸಂಗಕ್ಕೆ ಅನುಮತಿ ಕೋರಿದಲ್ಲಿ ಅಂತಹ ಪ್ರಕರಣಗಳನ್ನು ಸಂಘದ ಉಪಾಧ್ಯಕ್ಷರ ಅನುಮೋದನೆ ಪಡೆದು ಅನುಮತಿಸಲು ತೀರ್ಮಾನಿಸಿತು.**

**<u>ವಿಷಯ ಸಂಖ್ಯೆ: 14</u>**

**<u>2015-16ನೇ ಸಾಲಿನಲ್ಲಿ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುವ ಬಗ್ಗೆ.</u>**

ರಾಜ್ಯದಲ್ಲಿ ಪ್ರಸ್ತುತ ಒಟ್ಟು 479 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.( ಪ.ಜಾತಿ-265, ಪ.ವರ್ಗ-74 ಹಾಗೂ ಹಿಂದುಳಿದ ವರ್ಗ-140) ಈ ವಿವಿಧ ವರ್ಗಗಳ ವಸತಿ ಶಾಲೆಗಳಿಗೆ ಆಯಾ ಇಲಾಖೆಗಳು ಅಂದರೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳು ಅನುದಾನವನ್ನು ಸಂಘಕ್ಕೆ ಬಿಡುಗಡೆ ಮಾಡುತ್ತಿವೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮೇಲ್ಕಂಡ ವಸತಿ ಶಾಲೆಗಳ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆನುಗುಣವಾಗಿ 2013-14, 2014-15 ಮತ್ತು 2015-16ನೇ ಸಾಲುಗಳಲ್ಲಿ ಶಿಕ್ಷಣ ಇಲಾಖೆಯಿಂದ ಉಚಿತವಾಗಿ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಲಾಗಿದೆ. ಆದರೆ, 2015-16ನೇ ಸಾಲಿಗೆ ಅಗತ್ಯವಿದ್ದ ಪಠ್ಯಪುಸ್ತಕಗಳ ಪೂರೈಕೆಗೆ ಶಿಕ್ಷಣ ಇಲಾಖೆಗೆ ಸಂಘವು ಬೇಡಿಕೆಯನ್ನು ಸಲ್ಲಿಸಲಾಗಿದ್ದು, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಸಂಘಕ್ಕೆ ಪಠ್ಯಪುಸ್ತಕಗಳ ಖರೀದಿಗೆ ಸರ್ಕಾರವು ಅನುದಾನ ನೀಡುತ್ತಿದ್ದು, ಸದರಿ ಅನುದಾನದಲ್ಲಿ ಪಠ್ಯಪುಸ್ತಗಳನ್ನು ಖರೀದಿಸಲು ತಿಳಿಸಿರುತ್ತಾರೆ. 2016-17ನೇ ಸಾಲಿನಲ್ಲಿ ಪಠ್ಯಪುಸ್ತಕಗಳ ಖರೀದಿಗಾಗಿ 427 ಲಕ್ಷಗಳನ್ನು ವೆಚ್ಚವನ್ನು ಭರಿಸಬೇಕಾಗುತ್ತದೆ.

ಶಿಕ್ಷಣ ಇಲಾಖೆಯು ತನ್ನ ಅಧೀನದ ಶಾಲೆಗಳಿಗೆ ಉಚಿತವಾಗಿ ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕಗಳ ಸಂಘ(ರಿ), ಮುದ್ರಿಸಿ, ವಿತರಿಸುತ್ತಿದ್ದಾರೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳ ನಿರ್ವಹಣೆಗೆ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಈ ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಈ ವಿದ್ಯಾರ್ಥಿಗಳಿಗೂ ಸಹ ಪಠ್ಯಪುಸ್ತಕಗಳನ್ನು ಉಚಿತವಾಗಿ ಸರಬರಾಜು ಮಾಡುವುದು ಸೂಕ್ತವಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನ ಆಯವ್ಯಯದಲಿ ಪಠ್ಯಪುಸ್ತಕಗಳ ಖರೀದಿಗಾಗಿ ಪ್ರತ್ಯೇಕವಾದ ಅನುದಾನವನ್ನು ನಿಗಧಿಪಡಿಸಲಾಗುತ್ತಿಲ್ಲ. ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನದ ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕಗಳ ಸಂಘ(ರಿ), ಇವರಿಗೆ ಪಠ್ಯಪುಸ್ತಕಗಳ ಖರೀದಿಗಾಗಿ ರೂ.427 ಲಕ್ಷಗಳ ಅನುದಾನ ಬಿಡುಗಡೆ ಮಾಡುವ ಬಗ್ಗೆ ಚರ್ಚೆಗೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು 2015-16ನೇ ಸಾಲಿನಲ್ಲಿ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕಗಳ ಸಂಘ(ರಿ), ಇವರು ಪಠ್ಯಪುಸ್ತಕಗಳನ್ನು ಸರಬರಾಜು ಮಾಡಿರುವ ಬಾಬ್ತು 427.00 ಲಕ್ಷಗಳ ವೆಚ್ಚವನ್ನು ಸದರಿ ಸಂಸ್ಥೆಗೆ ಪಾವತಿಸಲು ಅನುಮೋದಿಸಿತು.**

<u>ವಿಷಯ ಸಂಖ್ಯೆ: 15</u>

<u>ಸಾರ್ವಜನಿಕ ಶಿಕ್ಷಣ ಇಲಾಖೆಯ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ/ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ, ಬೆಂಗಳೂರು ಇದಕ್ಕೆ 2013-14, 201-15 ಮತ್ತು 2015-16ನೇ ಸಾಲುಗಳ ಬಾಕಿ ವಂತಿಕೆ ಬಿಡುಗಡೆ ಮಾಡುವ ಬಗ್ಗೆ.</u>

ಸಾರ್ವಜನಿಕ ಶಿಕ್ಷಣ ಇಲಾಖೆಯ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ/ಕರ್ನಾಟಕ ರಾಜ್ಯ ಕ್ಷೇಮಾಭಿವೃದ್ಧಿ ನಿಧಿ ಬೆಂಗಳೂರು ಈ ಸಂಸ್ಥೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ/ಶಿಕ್ಷಕರುಗಳಿಗೆ

ಸದಸ್ಯ ಕಾರ್ಯದರ್ಶಿ ಅಧ್ಯಕ್ಷರು

ಜೀವ ವಿಮೆ, ವೈದ್ಯಕೀಯ ಚಿಕಿತ್ಸೆ, ಪ್ರತಿಭಾ ಪುರಸ್ಕಾರ, ಎಸ್.ಎಸ್.ಎಲ್.ಸಿ.ಯಲ್ಲಿ ಆಯಾಯ ವರ್ಷದ ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ ಶೇಕಡಾ 100ಕ್ಕೆ 100% ರಷ್ಟು ಫಲಿತಾಂಶ ಪಡೆದ ವಸತಿ ಶಾಲೆಗಳಿಗೆ ತಲಾ ರೂ.10,000/-ಪ್ರಶಸ್ತಿ ಮುಂತಾದ ಸೌಲಭ್ಯಗಳನ್ನು ನೀಡುವಲ್ಲಿ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅದನ್ನು ನಮ್ಮ ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಏಕಲವ್ಯ ಮಾದರಿ / ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೂ / ಶಿಕ್ಷಕರುಗಳಿಗೂ 2009-10ನೇ ಸಾಲಿನಿಂದ ವಿಸ್ತರಿಸಿದ್ದು, ನಿಯಮಾರೀತ್ಯ ಸಂಘದ ವಂತಿಗೆಗಳನ್ನು 2012-13ನೇ ಸಾಲಿನವರೆಗೆ ಪಾವತಿಸಲಾಗಿದೆ.

ಆದರೆ, 2013-14, 2014-15 ಮತ್ತು 2015-16ನೇ ಸಾಲಿನವರೆಗೆ ಸಂಘದ ವಂತಿಗೆಗಳನ್ನು ಸದರಿ ಸಂಸ್ಥೆಗೆ ಪಾವತಿಸಿರುವುದಿಲ್ಲ. ಆದ್ಯಾಗ್ಯೂ ಸಹ ಸದರಿ ಸಂಸ್ಥೆಯು ಸಂಸ್ಥೆಯ ಯೋಜನೆಗಳ ಅನ್ವಯ ರೂ ರೂ.63,92,851/-(ರೂ.ಅರವತ್ತಾ ಮೂರು ಲಕ್ಷದ ತೊಂಭತ್ತೆರಡು ಸಾವಿರದ ಎಂಟನೂರು ಐವತ್ತೊಂದು ಮಾತ್ರ) ಧನಸಹಾಯವನ್ನು ಸಂಘದ ಅಧೀನದ ವಿವಿಧ ವಸತಿ ಶಾಲೆಗಳಿಗೆ ಪಾವತಿಸಿರುವುದಾಗಿ ತಿಳಿಸಿರುತ್ತಾರೆ.

ಈ ಯೋಜನೆಯು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಉಪಯುಕ್ತವಾಗಿದ್ದು, 2013-14ರಿಂದ 2015-16ರವರೆಗೆ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಹಾಗೂ ಶಿಕ್ಷಕರ ಕಲ್ಯಾಣ ನಿಧಿಗಳಿಗೆ ಪಾವತಿಸಬೇಕಾದ ವಂತಿಗೆಗಳ ವಿವರಗಳು ಈ ಕೆಳಕಂಡಂತೆ ಇವೆ.

| ಕ್ರ.ಸಂ | ವರ್ಷ | Teacher Welfare Fund (In Rupees) | Student benefit Fund (In Rupees) | Total |
|---|---|---|---|---|
| 1 | 2013-14 | 964695 | 321565 | 1286260 |
| 2 | 2014-15 | 990810 | 330270 | 1321080 |
| 3 | 2015-16 | 1382288 | 460762 | 1843050 |
| | **ಒಟ್ಟು** | **3337793** | **1112597** | **4450390** |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ವಂತಿಗೆ ರೂ.11,12,597 ನ್ನು ಸಂಬಂಧಪಟ್ಟ ವಸತಿ ಶಾಲೆಗಳ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಬೇಕಾಗುತ್ತದೆ ಹಾಗೂ ರೂ. 33,37,793/-ಗಳನ್ನು ಕ್ಷೇಮಾಭಿವೃದ್ಧಿ ನಿಧಿಗೆ ಪಾವತಿಸಬೇಕಾಗುತ್ತದೆ. ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, 2013-14, 2014-15 ಮತ್ತು 2015-16ನೇ ಸಾಲಿನ 3 ಶೈಕ್ಷಣಿಕ ವರ್ಷಗಳ ವಂತಿಗೆ ರೂ. 44,50, 390/- ಗಳ ವೆಚ್ಚವನ್ನು ನಿರ್ವಹಣಾ ಅನುಧಾನದಲ್ಲಿ ಭರಿಸಲು ಅನುಮೋದನೆ ಕೋರಿ ಮಂಡಿಸಿದೆ.

ತೀರ್ಮಾನ:

**ಆಡಳಿತ ಮಂಡಳಿಯು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ವಂತಿಗೆ ರೂ.11,12,597ಗಳನ್ನು ಸಂಬಂಧಪಟ್ಟ ವಸತಿ ಶಾಲೆಗಳ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಲು ಮತ್ತು ರೂ. 33,37,793/-ಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ/ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿಗೆ ಪಾವತಿಸಲು ಅನುಮೋದಿಸಿತು.**

ವಿಷಯ ಸಂಖ್ಯೆ: 16

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ 2015-16 ನೇ ಸಾಲಿಗೆ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿ, ಸಮವಸ್ತ್ರ, ಶೂ,ಸಾಕ್ಸ್, ಬೆಲ್ಟ್, ಟೈ, ಬ್ಯಾಡ್ಜ್ ಗಳನ್ನು ಸರಬರಾಜು ಮಾಡಿರುವ ಬಗ್ಗೆ.

ಮೆ॥ ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯವರಿಗೆ ಆರ್ಥಿಕ ಇಲಾಖೆಯ ಅಧಿಸೂಚನೆ ಸಂ: ಆಇ 460 ವೆಚ್ಚ-12/15, ದಿ: 14.07.2015 ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ -1999 ರ ಕಲಂ 4(ಜಿ) ರಡಿ ಸದರಿ ಸಂಸ್ಥೆಯಿಂದ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ನೇರವಾಗಿ ಖರೀದಿಸಲು ವಿನಾಯಿತಿ ನೀಡಿರುತ್ತಾರೆ. ಹಾಗೂ ಸರ್ಕಾರದ ಆದೇಶ ಸಂ ಹಿಂವಕ 347 ಬಿಇಟಿ 2015, ದಿ: 17.07.2015 ರಲ್ಲಿ ಮೆ॥ ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯಿಂದ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಖರೀದಿಸಲು ಆದೇಶಿಸಿರುತ್ತಾರೆ. ಅದರಂತೆ ದಿನಾಂಕ: 17.07.2015 ರಂದು ಸಂಘದಿಂದ ಕಾರ್ಯಾದೇಶ ನೀಡಲಾಗಿದೆ. ಮೆ॥ ಮೈಸೂರು ಪೇಪರ್ ಮಿಲ್ಸ್ ಸಂಸ್ಥೆ ವಸತಿ ಶಾಲೆಗಳಿಗೆ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಿ ಪಾವತಿಗೆ ಬಿಲ್ಲುಗಳನ್ನು ಸಲ್ಲಿಸಿದ್ದು ಈಗಾಗಲೇ ರೂ 3,39,19,233/- ಗಳನ್ನು ಪಾವತಿಸಲಾಗಿದ್ದು, ಉಳಿದ ಬಿಲ್ಲುಗಳಿಗೆ ಪಾವತಿಸಲು ಕ್ರಮವಹಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 895 ಬಿಎಂಎಸ್ 2015, ಬೆಂಗಳೂರು, ದಿ:13.08.2015. ರಲ್ಲಿ ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ಬೆಂಗಳೂರು ರವರಿಂದ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ದಿನನಿತ್ಯ ಅಗತ್ಯವಿರುವ ಮೈಸೋಪು, ಬಟ್ಟೆ ಸೋಪು, ಪೇಸ್ಟ್, ಕೊಬ್ಬರಿ ಎಣ್ಣೆ, ಪೌಡರ್‌ಗಳನ್ನು ಖರೀದಿಸಲು ಕರ್ನಾಟಕ ಪಾರದರ್ಶಕ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಸಂಗ್ರಹಣೆಗಳಲ್ಲಿ ಅಧಿನಿಯಮ-1999 ರಡಿ 4(ಜಿ) ವಿನಾಯಿತಿಯನ್ನು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 490 ವೆಚ್ಚ 12/15, ದಿ:02.09.2015 ರಲ್ಲಿ ನೀಡಿರುವ ಹಿನ್ನಲೆಯಲ್ಲಿ ದಿ: 04.09.2015 ರಲ್ಲಿ ಸಂಘದಿಂದ ಕಾರ್ಯದೇಶ ನೀಡಲಾಗಿದೆ. ಸದರಿ ಸಂಸ್ಥೆಯವರು ವಸತಿ ಶಾಲೆಗಳ ಪ್ರತಿ ವಿದ್ಯಾರ್ಥಿಗೆ ಮಾಹೆಗೆ ಒಂದು ಕಿಟ್‌ನಂತೆ 2015-16 ನೇ ಸಾಲಿನ ಆಗಸ್ಟ್ ಮಾಹೆಯಿಂದ ಸರಬರಾಜು ಮಾಡಲು ಕ್ರಮವಹಿಸಿದೆ. ವಸತಿ ಶಾಲೆಗಳಿಗೆ ಸರಬರಾಜು ಮಾಡಿ ಪಾವತಿಗೆ ಬಿಲ್ಲುಗಳನ್ನು ಸಲ್ಲಿಸಿದ ನಂತರ ಪಾವತಿಸಲು ಕ್ರಮವಹಿಸಲಾಗುವುದು.

ಮೆ॥ ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯವರಿಗೆ ಆರ್ಥಿಕ ಇಲಾಖೆಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ -1999 ರ ಕಲಂ 4(ಹೆಚ್) ರಡಿ ಸದರಿ ಸಂಸ್ಥೆಯಿಂದ ಸಮವಸ್ತ್ರ ಬಟೆಯನ್ನು ನೇರವಾಗಿ ಖರೀದಿಸಲು ವಿನಾಯಿತಿ ನೀಡಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 520 ಬಿಎಂಎಸ್ 2015 ಬೆಂಗಳೂರು, ದಿ:25.05.2015. ರಲ್ಲಿ 2015-16 ನೇ ಸಾಲಿಗೆ ಸದರಿ ಸಂಸ್ಥೆಯಿಂದ ಸಿದ್ಧಪಡಿಸಿದ ಸಮವಸ್ತ್ರ ಸರಬರಾಜು ಮಾಡಲು ಆದೇಶಿಸಿರುವ ಹಿನ್ನಲೆಯಲ್ಲಿ ದಿ:04.06.2015 ಸಂಘದಿಂದ ಕಾರ್ಯಾದೇಶ ನೀಡಲಾಗಿದೆ. ಅದರಂತೆ ಸದರಿ ಸಂಸ್ಥೆಯವರು ಪತ್ರ ದಿ:19.10.2015 ರ ಪ್ರಕಾರ 2015-16 ನೇ ಸಾಲಿನಲ್ಲಿ ಉತ್ತರ ಕನ್ನಡ ಕೊಡಗು, ಚಿಕ್ಕಮಗಳೂರು, ಬಿಜಾಪುರ ಈ 4 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 26 ಜಿಲ್ಲೆಯ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಸರಬರಾಜು ಮಾಡಿರುವುದಾಗಿ ತಿಳಿಸಿರುತ್ತಾರೆ. ಸಮವಸ್ತ್ರಗಳನ್ನು ಸರಬರಾಜು ಮಾಡಿ ಪಾವತಿಗೆ ಬಿಲ್ಲುಗಳನ್ನು ಸಲ್ಲಿಸಿದ ನಂತರ ಪಾವತಿಸಲು ಕ್ರಮವಹಿಸಲಾಗುವುದು.

ಮೆ॥ ಡಾ ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಶೂ, ಸಾಕ್ಸ್, ಟೈ, ಮತ್ತು ಬೆಲ್ಟ್ ಮತ್ತು ಬ್ಯಾಡ್ಜ್‌ಗಳನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 639 ಬಿಎಂಎಸ್ 2015, ಬೆಂಗಳೂರು ದಿ 03.09.2015 ರ ಸರ್ಕಾರದ ಆದೇಶದಲ್ಲಿ ಮೆ॥ ಡಾ ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ 2015-16 ನೇ ಸಾಲಿಗೆ ನವೀಕರಿಸಲಾದ 4(ಜಿ) ರಡಿ ವಿನಾಯಿತಿಯನ್ನು ಪಡೆದು ಮುಂದಿನ ಕ್ರಮವಹಿಸಲು ಸೂಚಿಸಲಾಗಿದೆ. ಈ ಹಿನ್ನಲೆಯಲ್ಲಿ ಸಂಘವು ದಿ:05.09.2015 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ವಿನಾಯಿತಿಯನ್ನು ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಸದರಿ ಸಂಸ್ಥೆಗೆ 4(ಜಿ) ರಡಿ ವಿನಾಯಿತಿ ದೊರೆತ ನಂತರ ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗುವುದು.

ಈ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

ತೀರ್ಮಾನ:

**ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ 2015-16 ನೇ ಸಾಲಿಗೆ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿ, ಸಮವಸ್ತ್ರ, ಶೂ,ಸಾಕ್ಸ್, ಬೆಲ್ಟ್, ಟೈ, ಬ್ಯಾಡ್ಜ್ ಗಳನ್ನು ಸರಬರಾಜು ಮಾಡಿರುವ ಕ್ರಮವನ್ನು ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 17**
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯ ಉಪಯೋಗಕ್ಕೆ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ಗಳನ್ನು ಖರೀದಿಸಿರುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯ ಉಪಯೋಗಕ್ಕಾಗಿ 5 ಕಂಪ್ಯೂಟರ್‌ಗಳನ್ನು ಮತ್ತು 2 ಲ್ಯಾಪ್ ಟಾಪ್‌ಗಳನ್ನು ಡಿಜಿಎಸ್ ಅಂಡ್ ಡಿ ದರಗಳ ಅನುಮೋದನೆ ಇರುವ ಮೆ॥ ಎನ್.ಸ್ಪೈರ್ ಟೆಕ್ನಾಲಜಿಸ್ ಇಂಕ್, ಬೆಂಗಳೂರು ಇವರಿಂದ ಖರೀದಿಸಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

| Sl. No. | Description | Qty | Rate | Amount |
|---|---|---|---|---|
| 01 | Desktop Computer on DGS & d Rate Contract (Item No.33 of DGS & D Rate Contract) Configureation: Acer-Veriton-200: Intel Core i5, 4GB, DDR 3 RAM, 500 GB Sata HDD, 104 keys, optical mouse, monitor,DVD ROM Drive, Windows 8 preloaded | 05 | 38,266/- | 1,91,330-00 |
| 02 | Laptop Computer DGS & D Rate Contract (Item No.12 of DGS & D Rate Contract) Configureation: Acer—TMP 246: Intel Core i7, 4GB, DDR 3 RAM, 500 GB Sata HDD, 104 keys, optical mouse, monitor,DVD ROM Drive, Windows 8 preloaded | 02 | 56,000/- | 1,12,000-00 |
| | **TOTAL** | | | **3,03,330-00** |
| | VAT @ 5.5% | | | 16,683-00 |
| | **GRAND TOTAL** | **07** | | **3,20,013-00** |

ಸಂಘದ ಅಧ್ಯಕ್ಷರು ಹಾಗೂ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಗೃಹ ಕಛೇರಿಗೆ ಕಂಪ್ಯೂಟರ್ (HP Monitor Inbuilt CPU) ಪ್ರಿಂಟರ್, ಕಂಪ್ಯೂಟರ್ ಟೇಬಲ್ & ಛೇರ್‌ನ್ನು ಒದಗಿಸುವಂತೆ ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಗಳು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ DGS & D Rate Contract ನಲ್ಲಿ All in One Desktop Computer with preloaded operating system ( HP Intel Core i3) ದರವು Rs.44,500 + 5.5% VAT = Rs.46,948 ಹಾಗೂ HP M 128fn ಪ್ರಿಂಟರ್‌ನ ಅಂತಿಮ ದರವು ರೂ.15,981/– ಗಳಾಗಿರುತ್ತದೆ.

ಸದಸ್ಯ ಕಾರ್ಯದರ್ಶಿ | ಅಧ್ಯಕ್ಷರು

ಕಂಪ್ಯೂಟರ್ ಹಾಗೂ ಪ್ರಿಂಟರ್‌ನ್ನು ಖರೀದಿಸಿದಲ್ಲಿ ಒಟ್ಟು ಬೆಲೆ ರೂ.62,929/- ಗಳ ವೆಚ್ಚ ಭರಿಸಬೇಕಾಗುತ್ತಿದ್ದು, ಮಾನ್ಯ ಉಪಾಧ್ಯಕ್ಷರ ಅನುಮೋದನೆ ಪಡೆದು ಕ್ರಮವಹಿಸಿದೆ.

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯ ಉಪಯೋಗಕ್ಕೆ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ಗಳನ್ನು ರೂ.3.20 ಲಕ್ಷಗಳಲ್ಲಿ ಖರೀದಿಸಿದ ಕ್ರಮವನ್ನು ಅನುಮೋದಿಸಿತು. ಮಾನ್ಯ ಸಚಿವರ ಗೃಹ ಕಛೇರಿಗೆ ಕಂಪ್ಯೂಟರ್ ಮತ್ತು ಪ್ರಿಂಟರ್ಸ್‌ಗಳನ್ನು ರೂ.62,929/-ಗಳ ವೆಚ್ಚದಲ್ಲಿ ಖರೀದಿಸಲು ಅನುಮೋದಿಸಿತು.**

ವಿಷಯ ಸಂಖ್ಯೆ: 18

ಭಾರತದ ಸಂವಿಧಾನದ ಅನುಚ್ಛೇದ 371(ಜೆ)ರಡಿ ಹೈದರಬಾದ್ ಕರ್ನಾಟಕ ಪ್ರದೇಶಕ್ಕೆ ಹುದ್ದೆಗಳನ್ನು ಮೀಸಲಿಡುವ ಬಗ್ಗೆ.

ಭಾರತದ ಸಂವಿಧಾನ ಅನುಚ್ಛೇದ 371(ಜೆ)ಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಅದೇಶ 2013ರ ಅನ್ವಯ ಹೈದರಬಾದ್ ಕರ್ನಾಟಕ ಪ್ರದೇಶಧ 6 ಜಿಲ್ಲೆಗಳಲ್ಲಿನ ವಸತಿ ಶಾಲೆ/ಕಾಲೇಜುಗಳಿಗೆ ಸೃಜಿಸಲಾದ ಹುದ್ದೆಗಳನ್ನು ಸದರಿ ನಿಯಮದನ್ವಯ ವರ್ಗೀಕರಿಸಿ, ಮೀಸಲಿಡಬೇಕಾಗುತ್ತದೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿದೇಶಕರು ಕಛೇರಿ, ಬೆಂಗಳೂರು ಮತ್ತು ಬೆಂಗಳೂರು ಮಹಾನಗರ ವ್ಯಾಪ್ತಿಯ ವಸತಿ ಶಾಲೆಗಳಲ್ಲಿನ ಹುದ್ದೆಗಳಲ್ಲಿಯೂ 'ಸಹ ಮೇಲಿನ ಅಧಿಸೂಚಿಯಂತೆ, ಮೀಸಲಾತಿ ಇಡಬೇಕು. ತತ್ಸಂಬಂಧವಾಗಿ ಸಂಘವು ಹೈದರಬಾದ್ ಕರ್ನಾಟಕ ಪ್ರದೇಶದ 6 ಜಿಲ್ಲೆಗಳಲ್ಲಿನ ವಸತಿ ಶಾಲೆ/ಕಾಲೇಜುಗಳಲ್ಲಿನ ಹುದ್ದೆಗಳಿಗೆ ನಿಯಮಾನುಸಾರ ವೃಂದವಾರು ಶೇಕಡವಾರು ನಿಗಧಿಪಡಿಸಿದ ಪ್ರಮಾಣದಲ್ಲಿ ಹುದ್ದೆಗಳನ್ನು ಮೀಸಲಿರಿಸಿ, ಅಧಿಸೂಚನೆ ಹೊರಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ವಿವರಗಳನ್ನು ಅನುಬಂಧದಲ್ಲಿ ತೋರಿಸಿದೆ. ಈ ಕ್ರಮವು ಸರ್ಕಾರದ ಅಧಿಸೂಚನೆಯಂತೆ, ಅಗತ್ಯವಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತೀರ್ಮಾನ:

ಭಾರತದ ಸಂವಿಧಾನದ ಅನುಚ್ಛೇದ 371(ಜೆ)ರಡಿ ಹೈದರಬಾದ್ ಕರ್ನಾಟಕ ಪ್ರದೇಶಕ್ಕೆ ಹುದ್ದೆಗಳನ್ನು ಮೀಸಲಿಡುವ ಬಗ್ಗೆ ದಿನಾಂಕ:03-11-2015 ರಂದು ಹೊರಡಿಸಲಾದ ಅಧಿಸೂಚನೆಯನ್ನು ಸಭೆಯು ಅನುಮೋದಿಸಿ, ವಿಶೇಷ ಸರ್ವ ಸಾಮಾನ್ಯ ಸದಸ್ಯರ ಸಭೆಗೆ ಮಂಡಿಸಿ, ತೀರ್ಮಾನ ಪಡೆದು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ಅಳವಡಿಸಿಕೊಳ್ಳಲು ತೀರ್ಮಾನಿಸಿತು.

ವಿಷಯ ಸಂಖ್ಯೆ: 19

2015-16ನೇ ಸಾಲಿನಲ್ಲಿ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಜ ವಿಜ್ಞಾನ ಶಿಕ್ಷಕರುಗಳಿಗೆ "Communication and Spoken English" ವಿಷಯದ ಬಗ್ಗೆ ತರಬೇತಿಯನ್ನು ನೀಡುವ ಬಗ್ಗೆ.

ರಾಜ್ಯದಲ್ಲಿ ಪ್ರಸ್ತುತ ಒಟ್ಟು 479 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. (ಪ.ಜಾತಿ-265, ಪ.ವರ್ಗ-74ಹಾಗೂ ಹಿಂದುಳಿದ ವರ್ಗ-140) ಈ ವಿವಿಧ ವರ್ಗಗಳ ವಸತಿ ಶಾಲೆಗಳಿಗೆ ಆಯಾ ಇಲಾಖೆಗಳು ಅಂದರೆ ಸಮಾಜ ಕಲ್ಯಾಣ. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳು ಅನುದಾನವನ್ನು ಸಂಘಕ್ಕೆ ಬಿಡುಗಡೆ ಮಾಡುತ್ತಿವೆ.

ಮೇಲ್ಕಂಡ ವಸತಿ ವಸತಿ ಶಾಲೆಗಳಲ್ಲಿ 333 ಸಮಾಜ ವಿಜ್ಞಾನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಅವರುಗಳಲ್ಲಿ 105 ಶಿಕ್ಷಕರು ಕನ್ನಡ ಮಾಧ್ಯಮದಲ್ಲಿ ಪದವಿ ಪಡೆದವರಾಗಿದ್ದು ಉಳಿದ ಶಿಕ್ಷಕರುಗಳು ಆಂಗ್ಲಮಾಧ್ಯಮದಲ್ಲಿ ಪದವಿ ಪಡೆದಿರುತ್ತಾರೆ. ಆದರೆ ಬಹುತೇಕ ವಸತಿ ಶಾಲೆಗಳು ಆಂಗ್ಲಮಾಧ್ಯಮದಲ್ಲಿ ನಡೆಯುತ್ತಿರುವುದರಿಂದ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೋರ್ ಸಮಿತಿಯ ನಡವಳಿಯಂತೆ ಮಾನ್ಯ ಕಾರ್ಯನಿರ್ವಾಹಕ ನಿರ್ದೇಶಕರು ಈ ಕುರಿತು ತರಬೇತಿ ನೀಡುವ ಸಂಬಂಧ ನಿರ್ದೇಶಕರು, ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಇಂಗ್ಲೀಷ, ಸೌತ್ ಇಂಡಿಯಾ, ಜ್ಞಾನಭಾರತಿ ಆವರಣ ಬೆಂಗಳೂರು ರವರಿಗೆ "Communication Skills and Spoken English" ವಿಷಯದ ಬಗ್ಗೆ ತರಬೇತಿ ನೀಡಲು ತಗಲುವ ವೆಚ್ಚದ ವಿವರಗಳನ್ನ ನೀಡಲು ಕೋರಿದ್ದು, ಅದರಂತೆ ನಿರ್ದೇಶಕರು, ರಿಜನಲ್ ಇನ್ಸ್ಟುಟೂಟ್ ಆಫ್ ಇಂಗ್ಲೀಷ್, ಸೌತ್ ಇಂಡಿಯಾ, ರವರು ಒಂದು ತಂಡಕ್ಕೆ 10 ದಿನಗಳ ಅವಧಿಗೆ 50 ಶಿಬಿರಾರ್ಥಿಗಳಂತೆ ತರಬೇತಿ ನೀಡಲು ರೂ.3,40,000

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

23,80,000/- ಆಗುತ್ತದೆ. ಈ ವೆಚ್ಚವನ್ನು ವಸತಿ ಶಾಲಾ ನಿರ್ವಹಣಾ ಅನುದಾನದಲ್ಲಿ ಭರಿಸಬೇಕಾಗುತ್ತದೆ. ಈ ತರಬೇತಿಯನ್ನು 01/01/2016 ರಿಂದ ಪ್ರಾರಂಭಿಸಿ 10 ದಿವಸಗಳಂತೆ ಒಂದು ತಂಡದ ನಂತರ ಇನ್ನೊಂದು ತಂಡಕ್ಕೆ ಕ್ರಮವಾಗಿ ತರಬೇತಿ ನೀಡುವುದಾಗಿ ಸದರಿ ಸಂಸ್ಥೆಯು ತಿಳಿಸಿದೆ. .

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, 333 ಸಮಾಜ ವಿಜ್ಞಾನ ಶಿಕ್ಷಕರುಗಳಿಗೆ ಏಳು ತಂಡಗಳಲ್ಲಿ ರಿಜನಲ್ ಇನ್ಸ್ಟ್ಯೂಟೂಟ್ ಆಫ್ ಇಂಗ್ಲೀಷ್, ಸೌತ್ ಇಂಡಿಯಾ, ಬೆಂಗಳೂರು ವತಿಯಿಂದ ತರಬೇತಿ ಹಮ್ಮಿಕೊಳ್ಳಲು ಹಾಗೂ ರೂ 23,80,000/-ಗಳ ವೆಚ್ಚ ಭರಿಸುವ ಬಗ್ಗೆ ತೀರ್ಮಾನ ಕೋರಿದೆ.

<u>ತೀರ್ಮಾನ:</u>

**ವಿಷಯದ ಬಗ್ಗೆ ಆಡಳಿತ ಮಂಡಳ ಸಭೆಯು ಚರ್ಚಿಸಿತು. ಸಭೆಯಲ್ಲಿ ಹಾಜರಿದ್ದ, ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ), ಇವರು ತರಬೇತಿಗೆ ನಮೂದಿಸಿದ ಅಂದಾಜು ವೆಚ್ಚ ರೂ.23.80 ಲಕ್ಷಗಳಾಗಿದ್ದು, ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್, ಸೌತ್ ಇಂಡಿಯಾ ಈ ಸಂಸ್ಥೆಗೆ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 (KTPP Act)ರ ಕಲಂ 4ಜಿ ರಡಿ ವಿನಾಯತಿ ಪಡೆಯುವುದು ಅವಶ್ಯಕವೆಂದು ತಿಳಿಸಿದ ಕಾರಣ ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅನುಮೋದನೆ ಪಡೆಯಲು ತೀರ್ಮಾನಿತು.**

<u>ವಿಷಯ ಸಂಖ್ಯೆ: 20</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ 2015-16 ನೇ ಸಾಲಿಗೆ ಸಿದ್ಧಪಡಿಸಿದ ಸಮವಸ್ತ್ರ ಗಳನ್ನು ಸರಬರಾಜು ಮಾಡುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ 2015-16 ನೇ ಸಾಲಿನಲ್ಲಿ ಮೆ॥ ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯವರಿಗೆ ಸಿದ್ಧಪಡಿಸಿದ ಸಮವಸ್ತ್ರ ಸರಬರಾಜು ಮಾಡಲು ದಿ:04.06.2015 ರಂದು ಕಾರ್ಯಾದೇಶ ನೀಡಲಾಗಿದೆ.

ಸದರಿ ಸಂಸ್ಥೆಯು ಈವರೆಗೂ 30 ಜಿಲ್ಲೆಗಳ ಪೈಕಿ ಉತ್ತರ ಕನ್ನಡ ಕೊಡಗು, ಚಿಕ್ಕಮಗಳೂರು, ಬಿಜಾಪುರ 4 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 26 ಜಿಲ್ಲೆಯ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಪೂರೈಸಿರುತ್ತಾರೆ. ಸರಬರಾಜಾಗಿರುವಸಮವಸ್ತ್ರಗಳನ್ನು ವಿದ್ಯಾರ್ಥಿಗಳ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಸಿದ್ಧಪಡಿಸಿದ ಸಮವಸ್ತ್ರಗಳನ್ನು ಪೂರೈಸಿರುತ್ತಾರೆ. ಸರಬರಾಜಾಗಿರು ಸಮವಸ್ತ್ರಗಳನ್ನು ವಿದ್ಯಾರ್ಥಿಗಳ ಅಳತೆಗನುಣವಾಗಿ ಹೊಲಿದಿರುವುದಿಲ್ಲವೆಂದು ಹಾಗೂ ವಿದ್ಯಾರ್ಥಿನಿಯರಿಗೆ ಹೊಲೆದ ಸ್ಕರ್ಟ್‌ಗಳಲ್ಲಿ ಬೆಲ್ಟ್ ಹಾಕಿಕೊಳ್ಳುವುದಕ್ಕೆ ಲೂಪ್ಸ್ ಇರುವುದಿಲ್ಲವೆಂದು ವಸತಿ ಶಾಲೆಗಳ ಪ್ರಾಂಶುಪಾಲರು ವರದಿ ಮಾಡಿರುತ್ತಾರೆ. ಇದರಿಂದಾಗಿ ಸರಬರಾಜಾದ ಸಮವಸ್ತ್ರಗಳು ಬಹುತೇಕವಾಗಿ ಉಪಯೋಗಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿರುತ್ತಾರೆ.

ಮುಂದುವರೆದು ಸಂಘವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ದಂತೆ ಸರಬರಾಜಾಗಿರುವ ಸಮವಸ್ತ್ರಗಳನ್ನು "ಟೆಕ್ಸ್‌ಟೈಲ್ಸ್ ಕಮಿಟಿ" ಯಿಂದ 3ಡಿಜ Party inspection ಮಾಡಿಸಿ ವರದಿ ಪಡೆದಿದೆ. ಈ ವರದಿಯಲ್ಲಿ ಕೆಹೆಚ್‌ಡಿಸಿ ಸರಬರಾಜು ಮಾಡಿದ ಸಮವಸ್ತ್ರಗಳ ಬಟ್ಟೆಯ ಗುಣಮಟ್ಟವು ಸಂಘವು ನಿಗಧಿಪಡಿಸಿದ Specification ಅನುಗುಣವಾಗಿರುವುದಿಲ್ಲ. ವರದಿಯ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

| ಬಟ್ಟೆಯ ವಿವರ | ಕಾರ್ಯದೇಶದಲ್ಲಿ ನೀಡಲಾದ Specification | ಟೆಕ್ಸ್‌ಟೈಲ್ಸ್ ಕಮಿಟಿಯಿಂದ 3rd Party inspection ಮಾಡಿಸಿ ಪಡೆದ ವರದಿಯ ವಿವರ | ವ್ಯತ್ಯಾಸ (ಶೇಕಡವಾರು) |
|---|---|---|---|
| ಬ್ರೌನ್ ಕಲರ್ ಸೂಟಿಂಗ್ | 2/30 spc X 2/30 spc-137 cms (Width) 67% Polyster, 33% cotton | 72.1 % Polyster, 27.9 % cotton | 5.1 % Polyster, 5.1 % cotton |
| ಆಫ್ ಸ್ಲೀವ್ ಶರ್ಟ್ ಪಾಲಿಸ್ಟರ್ ಕಾಟನ್ ಪಾನ್ ಬಣ್ಣ | 2/80 spc X 2/80 spc-89 cms (Width) 67% Polyster, 33% cotton | 84.0 % Polyster, 16.0 % cotton | 17 % Polyster, 17 % cotton |

2015-16 ನೇ ಸಾಲಿನಲ್ಲಿ ಕೆಹೆಚ್‌ಡಿಸಿ ಸಂಸ್ಥೆಗೆ ನೀಡಲಾದ ಕಾರ್ಯಾದೇಶ ದನ್ವಯ ಸರಬರಾಜು ಮಾಡುವ ಸಮವಸ್ತ್ರಗಳ ಅಂದಾಜು ಮೊತ್ತ ರೂ 9,23,65,892/-ಗಳಾಗುತ್ತದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಕೆಹೆಚ್‌ಡಿಸಿ ನಿಗಮಕ್ಕೆ ಸರಬರಾಜು ಮಾಡಿರುವ ಸಮವಸ್ತ್ರದ ಬಾಬ್ತನ್ನು ಪಾವತಿಸುವ ಮುನ್ನ ಈ ಕೆಳಕಂಡ ನ್ಯೂನ್ಯತೆಗಳಿಗೆ ಬಿಲ್ಲಿನ ಮೊತ್ತದಲ್ಲಿ ಕಡಿತಗೊಳಿಸುವ ಬಗ್ಗೆ ಆಡಳಿತ ಮಂಡಳಿ ಚರ್ಚೆ ಮತ್ತು ತೀರ್ಮಾನ ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

1. ಹೆಣ್ಣು ಮಕ್ಕಳ ಸ್ಕರ್ಟ್‌ಗಳಿಗೆ ಬೆಲ್ಟ್ ಹಾಕಿಕೊಳ್ಳುವುದಕ್ಕೆ ಲೂಪ್ಸ್‌ಗಳನ್ನು ಹೊಲೆಯದೇ ಇದ್ದು, ಇದನ್ನು ಪುನಃ ಹೊಲೆಸಲು ತಗಲುವ ಅಂದಾಜು ವೆಚ್ ರೂ **10,92,495/-** ಗಳನ್ನು ತಡೆಹಿಡಿಯುವ ಬಗ್ಗೆ.
2. ಸಮವಸ್ತ್ರಗಳ ಬಟ್ಟೆಯ ಗುಣಮಟ್ಟವು ಮೇಲ್ಕಾಣಿಸಿದ ತಖ್ತೆಃಯಲ್ಲಿ ವಿವರಿಸಿರುವಂತೆ ನಿಗಧಿತ ಗುಣಮಟ್ಟಹೊಂದಿಲ್ಲದಿರುವುದರಿಂದ ಗುಣಮಟ್ಟದ ನ್ಯೂನ್ಯತೆ ಪ್ರಮಾಣವನ್ನು ಆಧರಿಸಿ ಬಿಲ್ಲಿನಲ್ಲಿ ಕಡಿತಗೊಳಸಬೇಕಾದ ಮೊತ್ತದ ಪ್ರಮಾಣದ ಬಗ್ಗೆ ನಿರ್ಧಾರ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು 2015-16ನೇ ಸಾಲಿನಲ್ಲಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಸರಬರಾಜು ಮಾಡಿದ ಸಮವಸ್ತ್ರಗಳ ಗುಣಮಟ್ಟದ ಬಗ್ಗೆ ನ್ಯೂನ್ಯತೆಗಳನ್ನು ಮನಗಂಡು, ಉಂಟಾದ ನಷ್ಟವನ್ನು ಗುಣಮಟ್ಟದ ನ್ಯೂನ್ಯತೆಗಳ ಪ್ರಮಾಣವನ್ನು ಆಧರಿಸಿ, ಬಿಲ್ಲಿನಲ್ಲಿ ಕಡಿತಗೊಳಸಬಹುದಾದ ಮೊತ್ತದ ಬಗ್ಗೆ ಲೆಕ್ಕಾಚಾರ ಲೆಕ್ಕಾಚಾರ ಮಾಡಲು ಜವಳಿ ಆಯುಕ್ತರನ್ನು ಕೋರಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರಿಂದ ಪತ್ರ ಬರೆಯಲು ತೀರ್ಮಾನಿಸಿತು.**

ವಿಷಯ ಸಂಖ್ಯೆ:- 21

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅದೀನದಲ್ಲಿನ ವಸತಿ ಶಾಲೆಗಳಿಗೆ ಅವಶ್ಯವಿರುವ ಪಾಠೋಪಕರಣ, ಪ್ರಯೋಗಾಲಯ ಉಪಕರಣಗಳನ್ನು ಕ್ರೀಡಾ ಸಾಮಗ್ರಿಗಳು ಮತ್ತು ಆಹಾರ ಪದಾರ್ಥಗಳ ತಯಾರಿಕೆಗೆ ಮತ್ತು ವಿತರಣೆಗೆ ಪಾತ್ರೆಗಳ ಸರಬರಾಜಿಗೆ ಟೆಂಡರ್‌ಗಳನ್ನು ಕರೆದು ಪೂರೈಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 505 ವಸತಿ ಶಾಲೆ ಮತ್ತು ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ 309 ವಸತಿ ಶಾಲೆ/ಕಾಲೇಜುಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆ /ಕಾಲೇಜುಗಳಿಗಳಿದ ಸ್ವೀಕರಿಸಲಾದ ಬೇಡಿಕೆ ಅನುಗುಣವಾಗಿ ಹಾಗೂ ಅನುದಾನದ ಲಭ್ಯತೆಯನ್ನು ಮನಗಂಡು ಪಾಠೋಪಕರಣ, ಪ್ರಯೋಗಾಲಯ ಉಪಕರಣಗಳನ್ನು ಕ್ರೀಡಾ ಸಾಮಗ್ರಿಗಳು ಮತ್ತು ಆಹಾರ ಪದಾರ್ಥಗಳ ತಯಾರಿಕೆಗೆ ಮತ್ತು ವಿತರಣೆಗೆ ಪಾತ್ರೆಗಳ ಸರಬರಾಜಿಗೆ ಸಾಮಗ್ರಿವಾರು ಪ್ರತ್ಯೇಕ ಪ್ರತ್ಯೇಕ ಟೆಂಡರ್‌ಗಳನ್ನು ಕರೆಯಲು ದಸ್ತಾವೇಜನ್ನು ತಯಾರಿಸಿ ಸರ್ಕಾರದ ಅನುಮೋದನೆ ಪಡೆಯಲು ಕಡತಗಳನ್ನು ಮಂಡಿಸಿದೆ.

ಸಾಮಗ್ರಿವಾರು ಟೆಂಡರ್‌ಗಳನ್ನು ಕರೆಯಲು ನಿಗಧಿಪಡಿಸಿದ ಅಂದಾಜು ಮೊತ್ತ ಹಾಗೂ ಇತರೆ ವಿವರಗಳು ಈ ಕೆಳಕಂಡಂತಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| ಕ್ರ ಸಂ | ಸಾಮಗ್ರಿಗಳ ವಿವರ | ವಸತಿ ಶಾಲೆಗಳ ಸಂಖ್ಯೆ | ಅಂದಾಜು ಮೊತ್ತ |
|---|---|---|---|
| 1 | ಪಾಠೋಪಕರಣಗಳು | 248 | 28692646 |
| 2 | ಪ್ರಯೋಗಾಲಯ ಉಪಕರಣಗಳು | 248 | 18724744 |
| 3 | ಕ್ರೀಡಾ ಸಾಮಗ್ರಿಗಳು | 248 | 23383920 |
| 4 | ಪಾತ್ರೆಪರಿಕರಗಳು | 268 | 6,20,00,000 |

ಮೇಲಿನ ವೆಚ್ಚವನ್ನು ವಸತಿ ಶಾಲೆಗಳ ನಿರ್ವಹಣೆಗಾಗಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಲಭ್ಯವಿರುವ ಅನುದಾನದಲ್ಲಿ ಬರಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿಯ ಮಂಡಿಸಿ ಪ್ರಸ್ತಾಪಿಸಿದಂತೆ ಇ-ಪೋರ್ಟಲ್ ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ -1999 ರಡಿ ಟೆಂಡರ್‌ಗಳನ್ನು ಕರೆಯಲು ಅನುಮೊದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಸತಿ ಶಾಲೆಗಳಿಗೆ ಅಗತ್ಯವಿರುವ ಪಾಠೋಪಕರಣ, ಪ್ರಯೋಗಾಲಯ ಉಪಕರಣಗಳನ್ನು ಕ್ರೀಡಾ ಸಾಮಗ್ರಿಗಳು ಮತ್ತು ಆಹಾರ ಪದಾರ್ಥಗಳ ತಯಾರಿಕೆ ಹಾಗೂ ವಿತರಣೆಗೆ ಅವಶ್ಯಕ ಅಡುಗೆ ಪರಿಕರಗಳನ್ನು ಸಂಘದವತಿಯಿಂದ ಟೆಂಡರ್‌ಗಳನ್ನು ಕರೆದು ಸರಬರಾಜು ಮಾಡಲು ಅನುಮೋದಿಸಿತು.**

ವಿಷಯ ಸಂಖ್ಯೆ: 22

**ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾದ ವಿದಾನಸಭಾ ಕ್ಷೇತ್ರ ಮಟ್ಟದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ/ಅಟಲ್ ಬಿಹಾರಿ ವಾಜಪೇಯಿ/ಏಕಲವ್ಯ ವಸತಿ ಶಾಲೆ ಮತ್ತು ಶಾಲಾ ಅಭಿವೃದ್ಧಿ ಮಿತಿಯನ್ನು ಪುನರ್ ರಚಿಸುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ: 21 ಮೊದೇಶಾ 2011 ದಿನಾಂಕ:31-05-2011 ರಲ್ಲಿ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಶಾಲಾ ಅಭಿವೃದ್ಧಿ ಮತ್ತು ಮೇಲು ಉಸ್ತುವಾರಿ ಸಮಿತಿಯನ್ನು (Residential School Development and Management Committee) ಮಾನ್ಯ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ವಿಧಾನಸಭಾ ಕ್ಷೇತ್ರ ಮಟ್ಟದ ಸಮಿತಿಯನ್ನು ರಚಿಸಿ ಆದೇಶಿಸಿದೆ. ಸಮಿತಿಯ ಅಧ್ಯಕ್ಷರ ಮತ್ತು ಸದಸ್ಯರುಗಳ ವಿವರಗಳು ಈ ಕೆಳಕಂಡಂತೆ ಇವೆ,

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| | | |
|---|---|---|
| 1 | ಮಾನ್ಯ ವಿಧಾನಸಭಾ ಸದಸ್ಯರು | ಅಧ್ಯಕ್ಷರು |
| 2 | ಮಾನ್ಯ ವಿಧಾನ ಸಭಾ ಪರಿಷತ್ ಸದಸ್ಯರು (ಆ ವಿಧಾನ ಸಭಾ ಕ್ಷೇತ್ರದಲ್ಲಿ ವಾಸಿಸುತ್ತಿರುವವರು) | ಸದಸ್ಯರು |
| 3 | ತಹಶೀಲ್ದಾರರು | ಸದಸ್ಯರು |
| 4 | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 5 | ಕಾರ್ಯ ನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯತ್ | |
| 6 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿ |
| 7 | ಇಬ್ಬರು ವಿದ್ಯಾರ್ಥಿಗಳ ಪೋಷಕರು (ಸದರಿ ಸಮಿತಿಯು ನಾಮ ನಿರ್ದೇಶನ ಮಾಡಿಕೊಳ್ಳುವುದು) | ಸದಸ್ಯರು |
| 8 | ಇಬ್ಬರು ವಸತಿ ಶಾಲೆಗಳ ಪ್ರಾಂಶುಪಾಲರು (ಸದರಿ ಸಮಿತಿಯು ನಾಮ ನಿರ್ದೇಶನ ಮಾಡಿಕೊಳ್ಳುವುದು) | ಸದಸ್ಯರು |

ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಶಾಸಕರ ಕಲ್ಯಾಣ ಸಮಿತಿ ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಸಭೆಗಳಲ್ಲಿ ತಾಲ್ಲೂಕು ಮಟ್ಟದ ಮೊರಾರ್ಜಿ ದೇಸಾಯಿ ವಸತಿ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳ ನಿರ್ವಹಣಾ ಸಮಿತಿಯನ್ನು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲು ತಿಳಿಸಿರುತ್ತಾರೆ. ಈಗಾಗಲೇ ಈ ಸಮಿತಿಯು ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ರಚನೆಯಾಗಿದ್ದು, ಬಹುತೇಕವಾಗಿ ವಸತಿ ಶಾಲೆಗಳಿಗೆ ಖಾಯಂ ಪ್ರಾಂಶುಪಾಲರುಗಳನ್ನು ನೇಮಕ ಮಾಡಿಕೊಂಡಿರುವುದರಿಂದ ಈಗಾಗಲೇ ರಚಿಸಿರುವ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಿ ಸಮಿತಿಗೆ ಜಾರಿಗೊಳಿಸುವುದು ಅಗತ್ಯವಾಗಿದೆ.

| | | |
|---|---|---|
| 1 | ಸ್ಥಳೀಯ ವಿಧಾನ ಸಭಾ ಕ್ಷೇತ್ರದ ಶಾಸಕರು | ಅಧ್ಯಕ್ಷರು |
| 2 | ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಶಾಸಕರು | ಸದಸ್ಯರು |
| 3 | ತಾಲ್ಲೂಕು ತಹಶೀಲ್ದಾರರು | ಸದಸ್ಯರು |
| 4 | ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ | ಸದಸ್ಯರು |
| 5 | ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿಗ, ತಾಲ್ಲೂಕು ಪಂಚಾಯತ್ | ಸದಸ್ಯರು |
| 6 | ಇಬ್ಬರು ವಿದ್ಯಾರ್ಥಿಗಳ ಪೋಷಕರು | ಸದಸ್ಯರು |
| 7 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, | ಸದಸ್ಯರು |
| 8 | ತಾಲ್ಲೂಕು ವಿಸ್ತರಣಾಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | ಸದಸ್ಯರು |
| 9 | ಕ್ಷೇತ್ರದ ಎಲ್ಲಾ ವಸತಿ ಶಾಲೆ/ಕಾಲೇಜುಗಳ ಪ್ರಾಂಶುಪಾಲರುಗಳು | ಸದಸ್ಯರು |
| 10 | (ಕಾರ್ಯನಿರ್ವಾಹಕ ನಿರ್ದೇಶಕರು ನಾಮ ನಿರ್ದೇಶನ ನೀಡುವ ತಾಲ್ಲೂಕಿನ ವಸತಿ ಶಾಲೆಯ ಪ್ರಾಂಶುಪಾಲರು) | ಸದಸ್ಯ ಕಾರ್ಯದರ್ಶಿಗಳು |

ಮೇಲಿನ ವಿಷಯವನ್ನು ಕೋರಿ ಆಡಳಿತ ಮಂಡಳಿ ಸಭೆ ಮುಂದೆ ಮಂಡಿಸಿ, ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಆದೇಶ ಪಡೆಯುವ ಬಗ್ಗೆ ಅನುಮೋದನೆ ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿ, ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಶಾಲಾ ಅಭಿವೃದ್ಧಿ ಮತ್ತು ಮೇಲು ಉಸ್ತುವಾರಿ ಸಮಿತಿಯನ್ನು ಮಾನ್ಯ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲು ಅನುಮೋದಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಆದೇಶ ಹೊರಡಿಸಲು ಕ್ರಮವಹಿಸಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 23**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನೇರ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಅಭ್ಯರ್ಥಿಗಳಿಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ, ಕೃಪಾಂಕ ನೀಡುವ ಪ್ರಕಿಯೆಯ ಬಗ್ಗೆ .**

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ನೇರ ನೇಮಕಾತಿಗೆ ನಿಗಧಿಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳಿಗೆ ಸೇವಾ ಕೃಪಾಂಕ ನೀಡುವ ಬಗ್ಗೆ ಸರ್ಕಾರದ ಅನುಮೋದನೆಯೊಂದಿಗೆ ಆಯ್ಕೆಗೆ ಅರ್ಹರಾದ 413 ಅಭ್ಯರ್ಥಿಗಳ ಪೈಕಿ 409 ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ದಿನಾಂಕ:19-10-2015 ರಂದು ಸಂಘವು ಪ್ರಕಟಿಸಿದೆ. ಉಳಿದ 4 ಪ್ರಕರಣಗಳಲ್ಲಿ ಒಂದು ಪ್ರಕರಣವು ವಯೋಮಿತಿ ಮೀರಿದ್ದು ಇದ್ದು, ಇನ್ನೂ 3 ಪ್ರಕರಣಗಳಲ್ಲಿ ನಿರಂತರ ಸೇವೆ ಸಲ್ಲಿಸದೇ ಸೇವಾ ಕಡಿತ ಇರುವುದನ್ನು ಗಮನಿಸಿ ಅನರ್ಹಗೊಳಿಸಲಾಗಿದೆ.

ಈ 409 ಅಭ್ಯರ್ಥಿಗಳ ಜಾತಿ/ಪ್ರವರ್ಗಗಳ ಕುರಿತು ಸಿಂಧುತ್ವ ಪ್ರಮಾಣ ಪತ್ರಗಳನ್ನು ಪಡೆಯಲು ಎಲ್ಲಾ ಸಕ್ಷಮ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಹಾಗೂ ಪೋಲಿಸ್ ಪರಿಶೀಲನಾ ವರದಿ ಪಡೆಯಲು ಸಂಬಂಧಪಟ್ಟ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.

ಮುಂದುವರಿದು, ಸಂಘದ 63ನೇ ಆಡಳಿತ ಮಂಡಳಿ ಸಭೆಯು ನಿರ್ಧರಿಸಿದಂತೆ, ಕೆಲವು ಶಿಕ್ಷಕರುಗಳು ಜುಲೈ ಮಾಹೆಯಿಂದ ಮಾರ್ಚ್ ಮಾಹೆಯವರೆಗೆ ಸೇವೆ ಸಲ್ಲಿಸಿದ ಅವಧಿಯನ್ನು ಪೂರ್ಣ ಶೈಕ್ಷಣಿಕ ಸೇವೆ ಎಂದು ಪರಿಗಣಿಸಿದ್ದರಿಂದ ಇನ್ನೂ 260 ಪ್ರಕರಣಗಳನ್ನು ಪರಿಶೀಲಿಸಬೇಕಾದ ಸಂದರ್ಭವಿದೆ. 260 ಪ್ರಕರಣಗಳ ಪರಿಶೀಲನಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಈಗಾಗಲೇ ಅನರ್ಹರೆಂದು ಪ್ರಕಟಿಸಲಾದ ಅಭ್ಯರ್ಥಿಗಳಲ್ಲಿ 130 ಅಭ್ಯರ್ಥಿಗಳು ಲಿಖಿತ ಮನವಿಯನ್ನು ಸಲ್ಲಿಸಿ, ತಮ್ಮ ಮನವಿಯನ್ನು ಪುನರ್ ಪರಿಶೀಲಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿಗಳನ್ನು ಪರಿಶೀಲಿಸಿ, ಹಿಂಬರಹ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಅವಗಾಹನೆಗೆ ಮಂಡಿಸುತ್ತಾ, ಸಂಘದ ಕ್ರಮವನ್ನು ಅನುಮೋದಿಸಲು ಕೋರಿದೆ.

**ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು**

ತೀರ್ಮಾನ:

1. ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಆಯ್ಕೆಗೆ ಅರ್ಹರಾಗಿರುವ 409 ಅಭ್ಯರ್ಥಿಗಳ ಜಾತಿ/ಪ್ರವರ್ಗಗಳ ಕುರಿತು ಸಿಂಧುತ್ವ ಪ್ರಮಾಣ ಪತ್ರ ಹಾಗೂ ಪೋಲಿಸ್ ವರದಿಗಳನ್ನು ಪಡೆದು ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ಮುನ್ನಾ ಮಾನ್ಯ ಅಧ್ಯಕ್ಷರಿಗೆ ಕಡತ ಸಲ್ಲಿಸಿ, ಅನುಮೋದನೆ ಪಡೆಯಲು ತೀರ್ಮಾನಿಸಿತು.
2. ಆಡಳಿತ ಮಂಡಳಿಯು ವಿಷಯದಲ್ಲಿ ಪ್ರಸ್ತಾಪಿಸಿದ 260 ಪ್ರಕರಣಗಳ ಹಾಗೂ ಆಚಿತ ಮನವಿ ಸಲ್ಲಿಸಿದ 130 ಅಭ್ಯರ್ಥಿಗಳ ಪ್ರಕರಣಗಳ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಆಯ್ಕೆಗೆ ಅರ್ಹರಾಗುವ ಅಭ್ಯರ್ಥಿಗಳ ವಿವರಗಳನ್ನು ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿ, ಅನುಮೋದನೆ ಪಡೆದು ಮುಂದಿನ ಕ್ರಮವಹಿಸುವಂತೆ ತೀರ್ಮಾನಿಸಿತು.

ವಿಷಯ ಸಂಖ್ಯೆ: 24

ಕರ್ನಾಟಕ ವಸತಿ ಶಿಕ್ಷಣ ಸಂಘದ ಕೇಂದ್ರ ಕಛೇರಿಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಶಿಕ್ಷಕರು ಮತ್ತು ಪ್ರಥಮ ದರ್ಜೆ ಸಹಾಯಕರುಗಳಿಗೆ ವಿಶೇಷ ಭತ್ಯೆಯನ್ನು ನೀಡುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ಮಾನ್ಯ ನ್ಯಾಯಾಲಯದ ಆದೇಶದನ್ವಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾದ ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳ ಸೇವಾ ವಿವರಗಳಿಗೆ ಸಂಬಂಧಿಸಿದ ದಾಖಲಾತಿ ಪರಿಶೀಲನೆ ಮತ್ತು ಇತರೆ ತುರ್ತು ಕೆಲಸಗಳಿಗೆ ವಸತಿ ಶಾಲೆಗಳ ಖಾಯಂ ಶಿಕ್ಷಕರುಗಳು ಮತ್ತು ಪ್ರಥಮ ದರ್ಜೆ ಸಹಾಯಕರುಗಳನ್ನು ಬೆಂಗಳೂರು ಮತ್ತು ಬೆಂಗಳೂರಿನ ಸುತ್ತಮುತ್ತಲಿನ ವಸತಿ ಶಾಲೆಗಳಿಂದ ನಿಯೋಜನೆ ಮೇಲೆ ನೇಮಕ ಮಾಡಿಕೊಳ್ಳಲಾಗಿದ್ದು, ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಸಿಬ್ಬಂದಿಗಳನ್ನು ಖಾಯಂ ಆಗಿ ವರ್ಗಾವಣೆ ಮಾಡಿಕೊಳ್ಳಲು ಸಂಘದ ಕೇಂದ್ರ ಕಛೇರಿಯಲ್ಲಿ ಹುದ್ದೆಗಳು ಸೃಜನೆಯಾಗಿರುವುದಿಲ್ಲ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳಲ್ಲಿ ಮೇಲಿನ ನಿಯೋಜನೆಗೆ ಯಾವುದೇ ಭತ್ಯೆ ನೀಡಲು ಅವಕಾಶವಿರುವುದಿಲ್ಲ. ಈ ನೌಕರರಗಳು ಅದ್ಯಾಗ್ಯೂ ಸಹ ವಿಶೇಷ ಭತ್ಯೆ ನೀಡುವುದು ಮಾನವೀಯ ದೃಷ್ಟಿಯಿಂದ ಸೂಕ್ತವೆಂದು ಭಾವಿಸಿ, ಈ ನೌಕರರು ಪ್ರತಿ ನಿತ್ಯ ತಮ್ಮ

ಸದಸ್ಯ ಕಾರ್ಯದರ್ಶಿ ಅಧ್ಯಕ್ಷರು

ಕರ್ತವ್ಯ ಸ್ಥಳದಿಂದ ಕೇಂದ್ರ ಕಛೇರಿಗೆ ಹಾಜರಾಗಲು ಪ್ರಯಾಣ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಮಾಹೆ ಪ್ರತಿ ಸಿಬ್ಬಂದಿಗೆ ರೂ.1500/-ಗಳ ವಿಶೇಷ ಭತ್ಯೆಯನ್ನು ನೀಡಲು ಉದ್ದೇಶಿಸಲಾಗಿದೆ. ಪ್ರತಿ ಮಾಹೆ 14 ಸಿಬ್ಬಂದಿಗಳಿಗೆ ರೂ.21,000/-ಗಳ ವೆಚ್ಚ ಭರಿಸಬೇಕಾಗಿದ್ದು, ವಾರ್ಷಿಕವಾಗಿ ರೂ.2.52ಲಕ್ಷಗಳ ವೆಚ್ಚ ಭರಿಸಬೇಕಾಗುತ್ತದೆ.

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ವಿವಿಧ ವಸತಿ ಶಾಲೆಗಳಿಂದ ನಿಯೋಜನೆ ಮೇಲೆ ಕೇಂದ್ರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಶಿಕ್ಷಕರುಗಳು ಮತ್ತು ಪ್ರಥಮ ದರ್ಜೆ ಸಹಾಯಕರುಗಳಿಗೆ, ವಿಶೇಷ ಭತ್ಯೆ ಪ್ರತಿ ಸಿಬ್ಬಂದಿಗೆ ರೂ.1500/-ಗಳಂತೆ ಒಟ್ಟು ಪ್ರತಿ ಮಾಹೆ 14ಸಿಬ್ಬಂದಿಗಳಿಗೆ ರೂ.21,000/-ಗಳ ವೆಚ್ಚ ಭರಿಸಬೇಕಾಗಿದ್ದು, ವಾರ್ಷಿಕವಾಗಿ ರೂ.2.52 ಲಕ್ಷಗಳ ವೆಚ್ಚ ಭರಿಸಲು ಹಾಗೂ ಈ ವೆಚ್ಚವನ್ನು ವಸತಿ ಶಾಲೆಗಳ ನಿರ್ವಹಣಾ ವೆಚ್ಚದಲ್ಲಿ ಭರಿಸಲು ಅನುಮೋದನೆ ಕೋರಿದೆ.

**ತೀರ್ಮಾನ:**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ಮಾನ್ಯ ನ್ಯಾಯಾಲಯದ ಆದೇಶದನ್ವಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾದ ಹೊರಸಂಪನ್ಮೂಲ ಭೋಧಕ ಸಿಬ್ಬಂದಿಗಳ ಸೇವಾ ವಿವರಗಳಿಗೆ ಸಂಬಂಧಿಸಿದ ದಾಖಲಾತಿ ಪರಿಶೀಲನೆ ಮತ್ತು ಇತರೆ ತುರ್ತು ಕೆಲಸಗಳಿಗೆ ವಸತಿ ಶಾಲೆಗಳಿಂದ ನಿಯೋಜನೆಗೊಂಡು, ಕೇಂದ್ರ ಕಛೇರಿಯಲ್ಲಿ ವಿಶೇಷ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು, ರೂ.1500/-ನ್ನು ಕರ್ತವ್ಯ ಮಿತಿಗೊಳಿಸಿದ ಅವಧಿಗೆ ಮಾತ್ರ ನೀಡಬೇಕೆಂದು ಸೂಚಿಸಿದ ಹಿನ್ನೆಲೆಯಲ್ಲಿ ಈ ಸಿಬ್ಬಂದಿಗಳಿಗೆ 6 ತಿಂಗಳ ಅವಧಿಗೆ ವಿಶೇಷ ಭತ್ಯೆ ನೀಡಲು ಆಡಳಿತ ಮಂಡಳಿಯು ತೀರ್ಮಾನಿಸಿತು.**

## ವಿಷಯ ಸಂಖ್ಯೆ: 25

## ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಅನುಮೋದಿಸುವ ಬಗ್ಗೆ

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಪದವಿ ಪೂರ್ವ ವಸತಿ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾಮಗಾರಿ ಹಾಗೂ ಹೆಚ್ಚುವರಿ ವಸತಿ ಗೃಹಗಳ ನಿರ್ಮಾಣಕ್ಕೆ ವಿವಿಧ ದಿನಾಂಕಗಳಂದು ಇ-ಪೋರ್ಟಲ್‌ನಡಿ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರರು ಅನುಮೋದಿಸಿರುವ ದರಗಳನ್ನು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಅಂಗೀಕಾರ ಸಮಿತಿ ಸಭೆಯ ದಿನಾಂಕ:04-09-2015 ರಂದು ಅನುಮೋದಿಸಲಾಗಿದೆ. ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. ನಡವಳಿಯ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| ಕ್ರ. ಸಂ | ಟೆಂಡರ್ ಕಾಮಗಾರಿ ವಿವರಗಳು | ಅನುಮೋದಿಸಿದ ಕಾಮಗಾರಿಗಳ ವಿವರಗಳು |
|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು | 20 |
| 2 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 11 |
| 5 | ವಿದ್ಯಾರ್ಥಿನಿಲಯ ಕಟ್ಟಡಗಳ ಕಾಮಗಾರಿ | 01 |
| 7 | ಹೆಚ್ಚುವರಿ ವಸತಿ ಗೃಹ ನಿರ್ಮಾಣ | 01 |
| ಒಟ್ಟು | | 33 |

ಮೇಲೆ ಹೇಳಲಾದ ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಅನುಮೋದಿಸಲು ಕೋರಿದೆ.

ತೀರ್ಮಾನ:

1. ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು(ವೆಚ್ಚ) ರವರು ವಿಷಯವನ್ನು ಅವಲೋಕಿಸಿ, ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಟೆಂಡರ್ ಅನುಮೋದನಾ ಸಮಿತಿಯಲ್ಲಿ ಅನುಮೋದನೆಯಾಗಿ ಮುಂದಿನ ಪ್ರಕ್ರಿಯೆ ಪೂರ್ಣಗೊಂಡ ನಂತರ ಆಡಳಿತ ಮಂಡಳಿ ಸಭೆಗೆ ಮಂಡಿಸಿ, ಅನುಮೋದನೆ ಕೋರುವ ಔಚಿತ್ಯ ಇಲ್ಲವೆಂದು ತಿಳಿಸಿ, ಇನ್ನು ಮುಂದೆ ವಿಷಯವನ್ನು ಮಂಡಿಸುವಾಗ ಆಡಳಿತ ಮಂಡಳಿ ಸಭೆಯ ಅನುಮೋದನೆಗೆ ಎಂಬ ಶಬ್ಧವನ್ನು ಉಪಯೋಗಿಸದೇ "ಅವಗಾಹನೆಗೆ" ಎಂಬ ಶಬ್ಧವನ್ನು ಉಪಯೋಗಿಸಲು ಸೂಚಿಸಿದರು. ಆಡಳಿತ ಮಂಡಳಿಯು ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳ ಸೂಚನೆಯನ್ನು ಒಪ್ಪಿಕೊಂಡು ಟೆಂಡರ್ ಅನುಮೋದನಾ ಸಮಿತಿಯ ನಡವಳಿಗಳನ್ನು ಅವಗಾಹಿಸಿತು.
2. ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು(ವೆಚ್ಚ), ಇವರು ಕಾಮಗಾರಿಯ ಮೊತ್ತವು ರೂ.20.00 ಕೋಟಿಗಳಿಗಿಂತ ಹೆಚ್ಚಾದಲ್ಲಿ ಆಡಳಿತ ಮಂಡಳಿಯ ಸಭೆಯಲ್ಲಿ ಟೆಂಡರ್‌ಗೆ ಅನುಮೋದನೆ ಪಡೆದು ಕಾರ್ಯಾದೇಶ ನೀಡಬೇಕೆಂದು ಸೂಚಿಸಿದರು. ಆಡಳಿತ ಮಂಡಳಿಯು ಇನ್ನು ಮುಂದೆ ಈ ನಿಯಮವನ್ನು ಅಳವಡಿಸಿಕೊಂಡು, ಅನುಷ್ಠಾನಗೊಳಿಸಲು ತೀರ್ಮಾನಿಸಿತು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

<u>ವಿಷಯ ಸಂಖ್ಯೆ: 26</u>

**<u>ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಕಾಮಗಾರಿಗಳ ಪ್ರಗತಿ ವಿವರಗಳನ್ನು ಸಲ್ಲಿಸುವ ಬಗ್ಗೆ.</u>**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಸಂಕೀರ್ಣ ನಿರ್ಮಾಣ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಸದರಿ ಕಾಮಗಾರಿಗಳ ಪ್ರಗತಿಯ ಘೋಶ್ವಾರೆಗಳನ್ನು ಕ್ರಮವಾಗಿ ಅನುಬಂಧಗಳಲ್ಲಿ ನೀಡಲಾಗಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

**<u>ತೀರ್ಮಾನ:</u>**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಕೈಗೆತ್ತಿಕೊಂಡ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಸಂಕೀರ್ಣದ ನಿರ್ಮಾಣದ ಕಾಮಗಾರಿಗಳ ಪ್ರಗತಿಯನ್ನು ತ್ವರಿತಗೊಳಿಸಿ, ಪೂರ್ಣಗೊಳಿಸಲು ಹಾಗೂ ಗುಣಮಟ್ಟ ಕಾಪಾಡಿಕೊಳ್ಳುವಂತೆ ಸೂಚಿಸಿತು.**

<u>ಹೆಚ್ಚುವರಿ ವಿಷಯ ಸಂಖ್ಯೆ: 1</u>

**<u>ಕನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ ವಿಲೀನಗೊಂಡ ಹಾಗೂ ನೇರ ನೇಮಕಾತಿಯಿಂದ ಆಯ್ಕೆಯಾದ ಪ್ರಾಂಶುಪಾಲರು ಬೋಧಕ/ಬೋಧಕೇತರ ಸಿಬ್ಬಂದಿಗಳ "ಪರಿವೀಕ್ಷಣ ಅವದಿ ಘೋಷಣೆಯ ಆದೇಶವನ್ನು ಹೊರಡಿಸುವ ಬಗ್ಗೆ.</u>**

ಕನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ ಖಾಲಿ ಇದ್ದ ಪ್ರಾಂಶುಪಾಲರು, ಶಿಕ್ಷಕರುಗಳು ಹಾಗೂ ಇತರೆ ಬೋಧಕೇತರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರನೇಮಕಾತಿ ಮಾಡಿಕೊಂಡು 3835 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ:29.05.2012ರಂದು ಪ್ರಕಟಿಸಲಾಗಿದೆ. ಸದರಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಶ್ನಿಸಿ, ಕನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಮೊರಾರ್ಜಿ ದೇಸಾಯಿ /ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ವಸತಿ ಶಾಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಹೊರಸಂಪನ್ಮೂಲ ಏಜೆನ್ಸಿಗಳ ವತಿಯಿಂದ ನೇಮಕಗೊಂಡು ಕಾರ್ಯನಿರ್ವಹಿಸಿದ ಪ್ರಾಂಶುಪಾಲರು ಹಾಗೂ ಸಹ ಶಿಕ್ಷಕರುಗಳು

ಸದಸ್ಯ ಕಾರ್ಯದರ್ಶಿ　　　　　　　　　　　　ಅಧ್ಯಕ್ಷರು

ಮಾನ್ಯ ಉಚ್ಛ ನ್ಯಾಯಾಲಯದಲ್ಲಿ WP.No.20204-364/2011 ಮತ್ತು ಇತರೆ ಸಂಯೋಜಿತ ರಿಟ್ ಅರ್ಜಿಗಳನ್ನು ದಾಖಲಿಸಿರುತ್ತಾರೆ. ಈ ಮಧ್ಯೆ ಉಚ್ಛ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು ಹಾಗೂ ಷರತ್ತುಗುಗಳೊಂದಿಗೆ ನೇರ ನೇಮಕಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡಲಾಗಿದ್ದು, ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಅರ್ಹ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳ ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ಪ್ರಕ್ರಿಯೆ ಪೂರ್ಣಗೊಂಡಿದ್ದು, ಆದೇಶಗಳನ್ನು ಮಾತ್ರ ಹೊರಡಿಸಬೇಕಾಗಿರುತ್ತದೆ.

ಮುಂದುವರೆದು ಸದರಿ ರಿಟ್ ಅರ್ಜಿಗಳನ್ನು ಆಲಿಸಿದ ಮಾನ್ಯ ಉಚ್ಛ ನ್ಯಾಯಾಲಯದ ಏಕ ಸದಸ್ಯ ಪೀಠ ದಿ:13.07.2012 ರಂದು ರಿಟ್ ಅರ್ಜಿದಾರರ ಪರವಾಗಿ ತೀರ್ಪು ನೀಡಿದ್ದು, ಮುಖ್ಯಾಂಶವು ಈ ಕೆಳಕಂಡಂತಿದೆ.

1. It is declared that all the Principals and teachers including the petitioners herein appointed on or after 2004-5 are entitled for the benefit of service weightage as specified in Recruitment Regulations 2011.
2. The respondents to complete the selection process pursuant to the recruitment notification dated:27.04.2011 by granting the benefit of service weightage to the petitioners and all other similarly situated Principals and teachers.
3. Since respondents have already processed the applications and issued final selection list and additional selection list, they have to redo the process of selection buy extending the benefit of service weightage to the petitioners and similarly situated candidates.
4. Till the completion of selection process as stated above the present placement of petitioners and others who are continuing in service shall not be disturbed.

ಸದರಿ ತೀರ್ಪನ್ನು ಪ್ರಶ್ನಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ W.A.No.5127/2012 ಹೂಡಿದ್ದು, ಸದರಿ ಮೇಲ್ಮನವಿಯನ್ನು ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠ ದಿ:28.02.2013 ರಂದು ಆಲಿಸಿ, ಈ ಕೆಳಕಂಡಂತೆ ಆದೇಶ ನೀಡಿರುತ್ತಾರೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

"In the result, the writ appeals filed by the appellant Society are dismissed. We affirm the view taken by the learned Single Judge that the respondents- Principals and teachers shall be entitled for service weightage. It is needless to mention that the respondents will be entitled for service weightage provided they have appeared for combined competitive examinations held on 24.07.2011 to 27.07.2011. The appellant society as far as possible, try to accommodate the respondents, if, after giving service weightage they are selected, without disturbing the candidates who have already been selected and appointed., Since their appointments are made subject to result of the writ petitions, in the event of discounting any one of them or withdrawing their appointments, for accommodating the respondents, they shall discontinuer or withdraw the appointment of "last come first go" principle".

ಈ ಹಿನ್ನೆಲೆಯಲ್ಲಿ ವಿಭಾಗೀಯ ಪೀಠದ ಮೇಲಿನ ತೀರ್ಪಿನ ಅನ್ವಯ ಹೊರಸಂಪನ್ಮೂಲ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳಿಗೆ ಅರ್ಹ ಸೇವಾ ಕೃಪಾಂಕ ನೀಡಿ, 409 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಕೃಪಾಂಕ ಪಡೆದು ಆಯ್ಕೆಯಾದ ಅಭ್ಯರ್ಥಿಗಳಿಗೆ ಜಾತಿ ಪತ್ರಕ್ಕೆ ಸಿಂಧುತ್ವ ಪ್ರಮಾಣ, ಪೋಲೀಸ್ ವರದಿ, ವೈದ್ಯಕೀಯ ದೃಢೀಕರಣ ಪತ್ರ ಮುಂತಾದವುಗಳನ್ನು ಪಡೆಯಲು ಸಕ್ಷಮ ಅಧಿಕಾರಿಗಳಿಗೆ ಪತ್ರ ಬರೆದು ಕ್ರಮವಹಿಸಲಾಗುತ್ತಿದೆ.

ಏತನ್ಮಧ್ಯೆ 2012-13ನೇ ಸಾಲಿನಲ್ಲಿ ನೇರ ನೇಮಕಾತಿಯಿಂದ ಆಯ್ಕೆಗೊಂಡ ಪ್ರಾಂಶುಪಾಲರು, ಸಹಾಯಕ ಶಿಕ್ಷಕರು / ಬೋಧಕೇತರ ಒಟ್ಟು 2459 ಸಿಬ್ಬಂದಿಯವರ ಪರಿವೀಕ್ಷಣಾ ಅವಧಿಯನ್ನು ಘೋಷಿಸಲು ಹಾಗೂ ಸರ್ಕಾರದ ವಿಶೇಷ ನಿಯಮಗಳು-2011 ರ ಅನ್ವಯ ದಿನಾಂಕ:01-10-2011 ರಿಂದ ಜಾರಿಗೆ ಬರುವಂತೆ ವಿಲೀನಗೊಂಡ 436 ಪ್ರಾಂಶುಪಾಲರು ಮತ್ತು ಶಿಕ್ಷಕರುಗಳಿಗೆ ಸೇವೆಯನ್ನು ಸ್ಥಿರೀಕರಿಸಿ ಆದೇಶ ಹೊರಡಿಸುವ ಪ್ರಕ್ರಿಯೆ ಅಂತಿಮ ಘಟ್ಟದಲ್ಲಿದೆ.

ಮೇಲ್ಕಂಡ ಮಾನ್ಯ ನ್ಯಾಯಾಲಯದ ಆದೇಶದನ್ವಯ ಆಯ್ಕೆಗೆ ಅರ್ಹರಾದ ಹೊರಸಂಪನ್ಮೂಲದ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಅಂತಿಮಗೊಳ್ಳುವ ಮುನ್ನಾ ನೇರ ನೇಮಕಾತಿಯಿಂದ ಆಯ್ಕೆಗೊಂಡು ಸೇವೆ ಸಲ್ಲಿಸುತ್ತಿರುವ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಪರಿವೀಕ್ಷಣಾ ಅವಧಿಯ ಘೋಷಣೆಯ ಆದೇಶ ಹೊರಡಿಸುವ ಬಗ್ಗೆ ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ ಸೂಕ್ತ ತೀರ್ಮಾನ ಕೋರಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ತೀರ್ಮಾನ:

ಆಡಳಿತ ಮಂಡಳಿ ಸಭೆಯು ವಿಷಯವನ್ನು ದೀರ್ಘವಾಗಿ ಚರ್ಚಿಸಿತು.

1. ಸರ್ಕಾರದ ವಿಶೇಷ ನಿಯಮಗಳು-2011 ರ ಅನ್ವಯ ದಿನಾಂಕ:01-10-2011 ರಿಂದ ಜಾರಿಗೆ ಬರುವಂತೆ ವಿಲೀನಗೊಂಡ 436 ಪ್ರಾಂಶುಪಾಲರು ಮತ್ತು ಶಿಕ್ಷಕರುಗಳಿಗೆ ಸೇವೆಯನ್ನು ಸ್ಥಿರೀಕರಿಸಿ ಆದೇಶ ಹೊರಡಿಸುವ ಬಗ್ಗೆ ಸಂಘವು ಕೈಗೊಂಡ ಕ್ರಮವನ್ನು ಸಭೆಯು ಅನುಮೋದಿಸಿತು.
2. ಅದೇ ರೀತಿ 2012-13ನೇ ಸಾಲಿನಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿಯಿಂದ ಆಯ್ಕೆಗೊಂಡ ಖಾಯಂ ಪ್ರಾಂಶುಪಾಲರು, ಸಹಾಯಕ ಶಿಕ್ಷಕರು / ಬೋಧಕೇತರ ಒಟ್ಟು 2459 ಸಿಬ್ಬಂದಿಯವರ ಪರಿವೀಕ್ಷಣಾ ಅವಧಿಯನ್ನು ಘೋಷಿಸಲು ಸಭೆಯು ತೀರ್ಮಾನಿಸಿತು.
3. ಮಾನ್ಯ ನ್ಯಾಯಾಲಯದ ಆದೇಶದನ್ವಯ ಆಯ್ಕೆಗೆ ಅರ್ಹರಾದ 409 ಹೊರಸಂಪನ್ಮೂಲದ ಪ್ರಾಂಶುಪಾಲರುಗಳ ಮತ್ತು ಶಿಕ್ಷಕರುಗಳಿಗೆ ಸಿಂಧುತ್ವ ಪ್ರಮಾಣ ಪತ್ರ ಮತ್ತು ಪೋಲೀಸ್ ವರದಿಯನ್ನು ಪಡೆದು ವಸತಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಭರ್ತಿ ಮಾಡುವ ಬಗ್ಗೆ ಸಂಘವು ನೇಮಕಾತಿ ಆದೇಶ ಹೊರಡಿಸಲು ತೀರ್ಮಾನಿಸಿತು.

ಹೆಚ್ಚುವರಿ ವಿಷಯ ಸಂಖ್ಯೆ: 2

ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ ವಸತಿ ಶಾಲೆಗಳಿಗೆ ನೇರ ನೇಮಕಾತಿ ಹೊಂದಿದ ಖಾಯಂ ಸ್ಟಾಫ್ ನರ್ಸ್ ವೇತನ ತಾರತಮ್ಯ ಸರಿಪಡಿಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011ರಲ್ಲಿ ವಸತಿ ಶಾಲೆಯ ಸ್ಟಾಫ್ ನರ್ಸ್ ಹುದ್ದೆಗಳಿಗೆ ಈ ಕೆಳಕಂಡಂತೆ ವಿದ್ಯಾರ್ಹತೆ ಮತ್ತು ವೇತನ ಶ್ರೇಣಿಯನ್ನು ನಿಗದಿಪಡಿಸಿದೆ.

Must have passed B.Sc nursing degree examination from an institution recognized by Indian Nursing Council.

**Or**

Must have passed SSLC or equivalent Examination and GNM Course comprising 3 years General Nursing and 6 months midwifery from a Institution recognized by an institution recognized by Indian Nursing Council/ Karnataka Nursing Council.

(2) Candidate must have studied Kannada as one of the languages either in the qualifying examinations or Degree or Pre University Course or SSLC or holder of Diploma in Kannada or passed Kannada Certificate Course (Kava/Jana/Rathna) conducted by Karnataka secondary Education Examination Board/Kannada Sahitya Parishath Bangalore.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಸ್ಟಾಫ್ ನರ್ಸ್‌ಗಳಿಗೆ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳ ಅನ್ವಯ ನಿಗದಿಪಡಿಸಿದ ವೇತನ ಶ್ರೇಣಿ 16000-29600 (ಹಿಂದಿನ ವೇತನ ಶ್ರೇಣಿ ರೂ. 8000-16800)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸ್ಟಾಫ್ ನರ್ಸ್‌ಗೆ ನಿಗದಿಪಡಿಸಿದ ವಿದ್ಯಾರ್ಹತೆಯು. ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯು ಒಂದೇ ಆಗಿದೆ. ಆದರೆ, ವೇತನ ಶ್ರೇಣಿಯಲ್ಲಿ ವ್ಯತ್ಯಾಸ ಇರುತ್ತದೆ. ಈ ಹಿನ್ನಲೆಯಲ್ಲಿ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಟಾಫ್ ನರ್ಸ್‌ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಟಾಫ್ ನರ್ಸ್‌ಗಳಿಗೆ ನಿಗದಿಪಡಿಸಿದ ವೇತನ ಶ್ರೇಣಿ ಅಂದರೆ, ರೂ. 17650-32000ಗಳನ್ನು ನಿಗದಿಪಡಿಸಲು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸ್ಟ್ಯಾಫ್ ನರ್ಸ್‌ಗಳಿಗೆ ವೇತನ ತಾರತಮ್ಯವನ್ನು ಸರಿಪಡಿಸುವ ಬಗ್ಗೆ ದಿನಾಂಕ:04-08-2015ರಂದು ನಡೆದ ಸಂಘದ 63ನೇ ಆಡಳಿತ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಿದ್ದು, ಈ ಕೆಳಕಂಡಂತೆ ತೀರ್ಮಾನ ನೀಡಿರುತ್ತದೆ.

**"ಆಡಳಿತ ಮಂಡಳಿ ಸಭೆಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಕರ್ನಾಟಕ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಸ್ಟಾಪ್ ನರ್ಸ ಹುದ್ದೆಗೆ ನಿಗದಿಪಡಿಸಿದ ವೇತನ ಶ್ರೇಣಿಯ ಕಾರ್ಯ ಒತ್ತಡವನ್ನು ಪರಿಗಣಿಸಿ ನಿಗದಿಯಾಗಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಟಾಪ್ ನರ್ಸ್ ವೇತನ ಶ್ರೇಣಿಯ ಆ ಇಲಾಖೆಯ ಕಾರ್ಯ ಒತ್ತಡವನ್ನು ಅವಲಂಬಿಸಿರುವುದನ್ನು ಮನಗಂಡು ಸಂಘವು ಈಗಾಗಲೇ ಅಳವಡಿಸಿಕೊಂಡಿರುವ ವೇತನ ಶ್ರೇಣಿಯನ್ನು ಮುಂದುವರಿಸಲು ತೀರ್ಮಾನಿಸಲಾಯಿತು."**

ಆದಾಗ್ಯೂ ಸಹ ವಸತಿ ಶಾಲೆಗಳ ಸ್ಟಾಫ್ ನರ್ಸ್‌ಗಳು ಸದರಿ ವೇತನ ತಾರತಮ್ಯವನ್ನು ಸರಿಪಡಿಸುವ ಬಗ್ಗೆ ಈ ಕಛೇರಿಗೆ ಮನವಿಗಳನ್ನು ಸಲ್ಲಿಸಿ, ಒತ್ತಾಯ ಮಾಡುತ್ತಿದ್ದಾರೆ. ಅಲ್ಲದೇ, ಇದೇ ರೀತಿ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011ರಲ್ಲಿ ವಸತಿ ಶಾಲೆಯ ಸಂಗೀತ ಶಿಕ್ಷಕರುಗಳಿಗೆ ನಿಗಧಿಪಡಿಸಿದ ವೇತನ ಶ್ರೇಣಿ ರೂ.16900-29600 ಇದ್ದು ಇದೇ ವಿದ್ಯಾರ್ಹತೆ ಹೊಂದಿದ ಶಿಕ್ಷಣ ಇಲಾಖೆಯ ಪ್ರೌಢಶಾಲಾ ಸಂಗೀತ ಶಿಕ್ಷಕರುಗಳಿಗೆ ನಿಗಧಿ ಪಡಿಸಿದ್ದ ವೇತನ ಶ್ರೇಣಿ ರೂ.17650-32000 ಇದ್ದು, ಈ ತಾರತಮ್ಯವನ್ನು ಸರಿಪಡಿಸುವ ಬಗ್ಗೆ ದಿನಾಂಕ:13-04-2015ರಂದು ನಡೆದ ಸಂಘದ 62ನೇ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚೆಯಾಗಿದ್ದು, ಈ ಕೆಳಕಂಡಂತೆ ತೀರ್ಮಾನ ನೀಡಿದೆ.

**"ಆಡಳಿತ ಮಂಡಳಿ ಸಭೆಯು ದೀರ್ಘವಾಗಿ ಚರ್ಚಿಸಿ, ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ, ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರದ ಆದೇಶ ಪಡೆದು ಸಂಘದ ನಿಯಮ ಮತ್ತು ನಿಬಂಧನೆಗಳಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು"**

ಸದರಿ ಸಭೆಯ ತೀರ್ಮಾನದಂತೆ, ಸಂಘವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದ ಆದೇಶ ಸಂಖ್ಯೆ: ಹಿಂವಕ 219 ಬಿಇಟಿ 2015, ದಿನಾಂಕ:30-06-2015ರಲ್ಲಿ ತಿದ್ದುಪಡಿ ಆದೇಶವನ್ನು ಪಡೆದು ಇದನ್ನು ಜಾರಿಗೊಳಸಲು ಪ್ರಸ್ತುತ ವಿಶೇಷ ಸರ್ವ ಸಾಮಾನ್ಯ ಸದಸ್ಯರ ಸಭೆಗೆ ವಿಷಯವನ್ನು ಮಂಡಿಸಿದೆ.

ವಿಷಯವನ್ನು ಅಡಳಿತ ಮಂಡಳಿಯ ಮುಂದೆ ಮಂಡಿಸಿ ಸಂಘದ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಖಾಯಂ ಸ್ಟಾಫ್ ನರ್ಸ್ ವೇತನ ಶ್ರೇಣಿಯನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಹಾಲಿ ನಿಗದಿಪಡಿಸಿರುವ ವೇತನ ಶ್ರೇಣಿ ರೂ. 16000-29600 ರ ಬದಲಾಗಿ ರೂ. 17650-32000ಗಳಿಗೆ ನಿಗದಿಪಡಿಸಲು ಅನುಮೋದನೆ ಕೋರಿದೆ. ಅನುಮೋದಿಸಿದಲ್ಲಿ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು 2011ಕ್ಕೆ ಸರ್ಕಾರದಿಂದ ತಿದ್ದುಪಡಿ ಆದೇಶ ಹೊರಡಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ತೀರ್ಮಾನ:**

**ಆಡಳಿತ ಮಂಡಳಿ ವಿಷಯವನ್ನು ದೀರ್ಘವಾಗಿ ಚರ್ಚಿಸಿತು. ವಸತಿ ಶಾಲೆಗಳಲ್ಲಿ ಪ್ರಸ್ತುತ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವ ಸ್ಟಾಫ್ ನರ್ಸ್‌ಗಳಿಗೆ ವೇತನ ಶ್ರೇಣಿಯನ್ನು ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ಹಾಲಿ ನಿಗದಿಪಡಿಸಿರುವ ವೇತನ ಶ್ರೇಣಿ ರೂ. 16000-29600 ರ ಬದಲಾಗಿ ರೂ. 17650-32000ಗಳಿಗೆ ಪರಿಷ್ಕರಿಸಿದಲ್ಲಿ ಭರಿಸಬೇಕಾದ ವೆಚ್ಚದ ವಿವರಗಳು, ಹಾಗೂ ಅವರ ಕಾರ್ಯಭಾರದ ವಿವರಗಳೊಂದಿಗೆ ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಿ ಅನುಮೋದನೆ ಪಡೆಯಲು ತೀರ್ಮಾನಿಸಿತು.**

**ಹೆಚ್ಚುವರಿ ವಿಷಯ ಸಂಖ್ಯೆ: 3**
**ಮೊರಾರ್ಜಿ ದೇಸಾಯಿ / ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ 6 ನೇ ತರಗತಿಗೆ ಸ್ಥಳೀಯ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವ ಬಗ್ಗೆ**

ರಾಜ್ಯದಲ್ಲಿ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ/ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ 358 ಮೊರಾರ್ಜಿ ದೇಸಾಯಿ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಿಗೆ 6ನೇ ತರಗತಿಗೆ ಸಿ.ಇ.ಟಿ. ಮಾದರಿಯಲ್ಲಿ ಆಯ್ಕೆ ಪರೀಕ್ಷೆ ನಡೆಸಿ ಜಿಲ್ಲಾಮಟ್ಟದ ರ್‍ಯಾಂಕ್ ಪಟ್ಟಿಯನ್ನು ತಯಾರಿಸಿ, ಮೆರಿಟ್ ಮತ್ತು ಮೀಸಲಾತಿ ನಿಯಮದನ್ವಯ ಆಯ್ಕೆಗೊಳಿಸಲಾಗುವುದು. ಈ ವಸತಿ ಶಾಲೆಗಳಿಗೆ ಸ್ಥಳೀಯರಿಗೆ ಮೀಸಲಾತಿ ಇರುವುದಿಲ್ಲ.

ಈ ವಿಷಯವು ಶಾಸನಬದ್ಧ ಶಾಸಕರ ಸಭೆಗಳಲ್ಲಿ ಈ ವಿಷಯವು ಚರ್ಚೆಯಾಗಿದ್ದು, ಸ್ಥಳೀಯರಲ್ಲಿ ಬಹಳಷ್ಟು ಬಡ ಕುಟುಂಬದವರು ವಾಸವಾಗಿದ್ದು, ಅವರುಗಳ ಮಕ್ಕಳುಗಳಿಗೆ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸ ನೀಡುವುದು ಸೂಕ್ತವಾಗಿದ್ದು, ಮೀಸಲಾತಿ ಪರಿಗಣಿಸುವಂತೆ ಸೂಚಿಸಿರುತ್ತಾರೆ.

ರಾಜ್ಯದಲ್ಲಿ 115 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹೆಣ್ಣು ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳನ್ನು ಮಂಜೂರು ಮಾಡಿದ ಸರ್ಕಾರದ ಆದೇಶ ಕ್ರಮಸಂಖ್ಯೆ: ಸಕಇ 53 ಎಂಡಿಎಸ್.209 ದಿನಾಂಕ 19.5.2009 ರಲ್ಲಿ ಮಂಜೂರಾದ ವಸತಿ ಶಾಲೆಯ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಆಯಾ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಕಾಯ್ದಿರಿಸಲು ತಿಳಿಸಲಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ಮೊರಾರ್ಜಿ ದೇಸಾಯಿ / ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೂ ಸಹ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ನಿಗದಿಪಡಿಸಿದಂತೆ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನ ವಿದ್ಯಾರ್ಥಿಗಳಿಗೆ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಸೂಕ್ತ ಮೀಸಲಾತಿ ಕಲ್ಪಿಸುವ ಬಗ್ಗೆ ತೀರ್ಮಾನಕ್ಕೆ ಮಂಡಿಸಿದೆ. ಆಡಳಿತ ಮಂಡಳಿಯ ತೀರ್ಮಾನದಂತೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲಾಗುವುದು.

**ತೀರ್ಮಾನ:**

**ಮೊರಾರ್ಜಿ ದೇಸಾಯಿ / ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಗೂ ಸಹ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ನಿಗದಿಪಡಿಸಿದಂತೆ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಸೂಕ್ತ ಮೀಸಲಾತಿ ಕಲ್ಪಿಸುವ ಬಗ್ಗೆ ಪ್ರತ್ಯೇಕ ಕಡತ ಸಲ್ಲಿಸಿ, ಸರ್ಕಾರದ ನೀತಿ ರೂಪಿಸಿಕೊಳ್ಳಲು ತೀರ್ಮಾನಿಸಿತು.**

<u>ಹೆಚ್ಚುವರಿ ವಿಷಯ ಸಂಖ್ಯೆ 4</u>
<u>ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ವಂತ ಕಟ್ಟಡ ಶಾಲೆಗಳಲ್ಲಿ BOT ಪದ್ಧತಿಯಲ್ಲಿ ಸೌರಶಕ್ತಿ ಸ್ಥಾವರಗಳನ್ನು ಸ್ಥಾಪಿಸಲು ಟೆಂಡರ್ ಕರೆಯುವ ಬಗ್ಗೆ.</u>

ಮೆ॥ ಗ್ರೀಟ್ಯೂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರು 25 ಆಯ್ದ ಹಿಂದುಳಿದ ಶಾಲೆಗಳಲ್ಲಿ BOT ಪದ್ಧತಿಯಲ್ಲಿ ಸೌರಶಕ್ತಿ ಸ್ಥಾವರಗಳನ್ನು ಪ್ರಾಯೋಗಿಕವಾಗಿ ಸ್ಥಾಪಿಸಲು ಮುಂದೆ ಬಂದಿದ್ದು, ಈ ಪದ್ಧತಿಯು ಒಂದು ದೀರ್ಘಾವಧಿ ಕಾಲದ ಅಂದರೆ 25 ವರ್ಷಗಳ ಯೋಜನೆಯಾಗಿರುವುದರಿಂದ ಪ್ರಾಯೋಗಿಕವಾಗಿ 25 ಶಾಲೆಗಳಲ್ಲಿ ಮಾತ್ರ ಕೈಗೆತ್ತಿಕೊಳ್ಳಲು ಸಾಧ್ಯವಿರುವುದಿಲ್ಲ. ಸಂಘಕ್ಕೆ ಸಧ್ಯ ಮುಂಗಡ ವೆಚ್ಚ ಇಲ್ಲದಿದ್ದಾಗ್ಯೂ ಅದು ತನ್ನ ವಸತಿ ಶಾಲೆಗಳಲ್ಲಿ ಸ್ಥಳಾವಕಾಶವನ್ನು ಹೊರಗಿನ ಏಜೆನ್ಸಿಗೆ ಕೊಡಬೇಕಾಗುವುದರಿಂದ ಮತ್ತು ಅವರು ಅಲ್ಲಿ ಸೌರಶಕ್ತಿಯನ್ನು ಉತ್ಪಾದಿಸುವುದರಿಂದ ವರಮಾನವನ್ನು ಗಳಿಸುತ್ತಾರೆ. ಆದ್ದರಿಂದ, ಇದನ್ನು KTPP ಕಾಯ್ದೆ ಅನ್ವಯ ಟೆಂಡರ್ ಮುಖಾಂತರವೇ ಕೈಗೆತ್ತಿಕೊಳ್ಳಬೇಕಾಗುತ್ತದೆ. ವಿಷಯವನ್ನು ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಿ, ಸೂಕ್ತ ತೀರ್ಮಾನ ಕೋರಿದೆ.

**ತೀರ್ಮಾನ:**

**ಸಮಯದ ಅಭಾವದಿಂದ ವಿಷಯವು ಚರ್ಚೆಗೆ ಬಂದಿರುವುದಿಲ್ಲ.**

<u>ಹೆಚ್ಚುವರಿ ವಿಷಯ ಸಂಖ್ಯೆ: 5</u>
<u>ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೃತ ಕುಟುಂಬದ ಸದಸ್ಯರುಗಳಿಗೆ ಅನುಕಂಪದ ಆಧಾರದ ಮೇಲೆ ಪರಿಹಾರ ಧನ ನೀಡುವ ಬಗ್ಗೆ</u>

ಸದಸ್ಯ ಕಾರ್ಯದರ್ಶಿ ಅಧ್ಯಕ್ಷರು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ ವಸತಿ ಶಾಲೆಗಳ ಖಾಯಂ ಸಿಬ್ಬಂದಿಗಳ ಪೈಕಿ 13 ಖಾಯಂ ಸಿಬ್ಬಂದಿಗಳು ಮೃತ ಪಟ್ಟಿರುತ್ತಾರೆ.

ಸಂಘದ ಅಧೀನದಲ್ಲಿ ಮೃತಪಟ್ಟ ಹದಿಮೂರು(13) ಮೃತ ಕುಟುಂಬದ ಸದಸ್ಯರುಗಳ ಪೈಕಿ ಶ್ರೀಮತಿ.ಲತಾ ಕೋಂ.ದಿವಂಗತ.ಕುಮಾರಸ್ವಾಮಿರವರಿಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿದ್ದರಿಂದ ಪದವಿ ಪೂರ್ವ ಕಾಲೇಜು, ದಾವಣಗೆರೆಗೆ ನೇಮಕಾತಿ ಮಾಡಿ ದಿನಾಂಕ 21.01.2013 ರಂದು ಆದೇಶಿಸಿದೆ.

ಈ ಕೆಳಕಂಡ ಎರಡು ಮೃತ ಕುಟುಂಬದ ಸದಸ್ಯರುಗಳಿಗೆ ದ್ವಿ.ದ.ಸ. ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ದಾಖಲಾತಿಗಳನ್ನು ಪರಿಶೀಲಿಸಲಾಗುತ್ತಿದೆ.

ಶ್ರೀಮತಿ. ಶರಣಮ್ಮ ಕೋಂ.ದಿವಂಗತ. ಬಸಪ್ಪ, ಕನ್ನಡ ಭಾಷಾ ಶಿಕ್ಷಕರು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೊಸರಕಲ್, ರಾಯಚೂರು ಜಿಲ್ಲೆ ಇವರು ಎಸ್.ಎಸ್. ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಗಣಕಯಂತ್ರ 1 ವರ್ಷದ ತರಬೇತಿ ಪಡೆದ ಬಗ್ಗೆ ದೃಢೀಕರಣ ನೀಡಿರುತ್ತಾರೆ.

1) ಶ್ರೀಮತಿ. ಶಕುಂತಲ ಕೋಂ.ದಿವಂಗತ. ಬಸವಲಿಂಗಪ್ಪ, ಗಣಿತ ಶಿಕ್ಷಕರು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ದೇವದುರ್ಗ, ರಾಯಚೂರು ಜಿಲ್ಲೆ ಇವರು ಎಸ್.ಎಸ್. ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಗಣಕಯಂತ್ರದ 6 ತಿಂಗಳ ತರಬೇತಿ ಪಡೆದ ಬಗ್ಗೆ ದೃಢೀಕರಣ ನೀಡಿರುತ್ತಾರೆ.

ಬಾಕಿ ಉಳಿದ ಹತ್ತು ಪ್ರಕರಣಗಳ ವಿವರಗಳು ಈ ಕೆಳಕಂಡಂತೆ ಇದೆ.

| ಕ್ರ ಸಂ. | ಹೆಸರು | ಹುದ್ದೆ | ಕಾರ್ಯನಿರ್ವಹಿಸುತ್ತಿದ್ದ ಶಾಲೆ | ಮರಣ ಹೊಂದಿದ ದಿನಾಂಕ | ಸಂಘದಲ್ಲಿ ಅನುಕಂಪದ ಆಧಾರದ ಮೇಲೆ ಹುದ್ದೆಗಳನ್ನು ಕೋರಿ ಅರ್ಜಿ ಸ್ವೀಕೃತವಾದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಗಳು |
|---|---|---|---|---|---|
| 1 | ಅಂಕುಶ್ ಡೋಂಗ್ರೆ | ದೈಹಿಕ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಗದಲ್, ಬೀದರ್ ಜಿಲ್ಲೆ | 04.12.2011 | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮ-2011ರ ಷೆಡ್ಯೂಲ್-1(19)ರಲ್ಲಿನ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನಿಗದಿಪಡಿಸಿದ ಎಸ್.ಎಸ್.ಎಲ್.ಸಿ ಪರೀಕ್ಷೆ ಉತ್ತೀರ್ಣ ಮತ್ತು ಕಂಪ್ಯೂಟರ್ 6 ತಿಂಗಳ ತರಬೇತಿ ಪಡೆದಿಲ್ಲವಾದ್ದರಿಂದ ಹಾಗೂ 'ಡಿ' ಗ್ರೂಪ್ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡಿಕೊಳ್ಳಲು |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| | | | | | |
|---|---|---|---|---|---|
| | | | | | ಅನುಮೋದನೆ ಇಲ್ಲದೇ ಇರುವುದರಿಂದ ಈ ವಿಷಯವನ್ನು ತಿಳಿಸಿ ದಿ: 28.02.2014ರಂದು ಹಿಂಬರಹ ನೀಡಲಾಗಿದೆ. |
| 2 | ಆನಂದ ಹರದಳ್ಳಿ | ಸಂಗೀತ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಚಿಕ್ಕಮುಚ್ಚಲಗುಡ್ಡ, ಬಾದಾಮಿ, ಬಾಗಲಕೋಟೆ | 16.07.2012 | ಸದರಿಯವರ ಪತ್ನಿಯಾದ ಶ್ರೀಮತಿ ಮಂಜುಳಾ ಹರದಳ್ಳಿರವರು 7ನೇ ತರಗತಿ ಉತ್ತೀರ್ಣರಾಗಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ |
| 3 | ಬಸವರಾಜ್ ಹತ್ತರಕಿ | ಸಮಾಜ ವಿಜ್ಞಾನ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ನಾಗನೂರು, ಬೆಳಗಾವಿ ಜಿಲ್ಲೆ | 02.02.2013 | ದಿವಂಗತ ಬಸವರಾಜ್ ಹತ್ತರಕಿ ಇವರು ಅವಿವಾಹಿತರಾಗಿರುವುದರಿಂದ ಅನುಕಂಪದ ಆಧಾರದ ಮೇಲೆ ಇವರ ಕುಟುಂಬವರ್ಗದವರಿಗೆ ನೇಮಕಾತಿ ಸೌಲಭ್ಯವನ್ನು ಒದಗಿಸಲು ಅವಕಾಶವಿರುವುದಿಲ್ಲವೆಂದು ದಿನಾಂಕ:26.10.2015 ರಂದು ಹಿಂಬರಹ ನೀಡಲಾಗಿದೆ. |
| 4 | ಮಲ್ಲಪ್ಪ ಹ. ಬಡಿಗೇರ | ಸಂಗೀತ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮೆಳ್ಳಿಗೇರಿ, ಮುಧೋಳ, ಬಾಗಲಕೋಟೆ | 05.11.2013 | ಸದರಿರವರ ಪತ್ನಿಯವರು ಅನುಕಂಪದ ಆಧಾರದ ಮೇಲೆ ಗ್ರೂಪ್-ಡಿ ಹುದ್ದೆಯನ್ನು ನೀಡುವಂತೆ ಕೋರಿರುತ್ತಾರೆ. ಪ್ರಸ್ತುತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಗ್ರೂಪ್-ಡಿ ಹುದ್ದೆ ಮಂಜೂರಾತಿ ಇರುವುದಿಲ್ಲ. ಸದರಿ ಹುದ್ದೆಗಳು ಸರ್ಕಾರದಿಂದ ಮಂಜೂರಾದ ನಂತರ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು ಎಂದು ಹಿಂಬರಹದ ಮೂಲಕ ತಿಳಿಸಿದೆ. |
| 5 | ವಿಶಾಲಾಕ್ಷಿ | ಸಮಾಜ ವಿಜ್ಞಾನ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮುಂಡಗೋಡು, ಉತ್ತರಕನ್ನಡ ಜಿಲ್ಲೆ | 07.01.2014 | ದಿವಂಗತ ವಿಶಾಲಾಕ್ಷಿ ಇವರು ಅವಿವಾಹಿತರಾಗಿರುವುದರಿಂದ ಅನುಕಂಪದ ಆಧಾರದ ಮೇಲೆ ಇವರ ಕುಟುಂಬವರ್ಗದವರಿಗೆ ನೇಮಕಾತಿ ಸೌಲಭ್ಯವನ್ನು ಒದಗಿಸಲು ಅವಕಾಶವಿರುವುದಿಲ್ಲವೆಂದು ಹಿಂಬರಹ ನೀಡಲಾಗಿದೆ. |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| | | | | | |
|---|---|---|---|---|---|
| 6 | ಈರಣ್ಣ | ಸಂಗೀತ ಶಿಕ್ಷಕರು | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮುರಗುಂಡಿ, ಅಥಣಿ ತಾ. ಬೆಳಗಾವಿ ಜಿಲ್ಲೆ | 05.04.2014 | ಸದರಿ ಪ್ರಕರಣದಲ್ಲಿ ಇವರ ಪತ್ನಿಯಾದ ಶ್ರೀಮತಿ ಮಂಜುಳಾ ನಾಯಕ್‌ರವರೂ ಮೃತರಾಗಿದ್ದು, ಇವರ ಇಬ್ಬರು ಮಕ್ಕಳು ಅಪ್ರಾಪ್ತ ವಯಸ್ಸಿನವರಾಗಿರುತ್ತಾರೆ.(ಸ್ನೇಹಾ-10ವರ್ಷ, ಜ್ಯೋತಿ-08ವರ್ಷ) ಇಂತಹ ಪ್ರಕರಣದಲ್ಲಿ ಅನುಕಂಪದ |
| 7 | ಉಷಾರಾಣಿ ಡಿ.ಆರ್ | ಶುಶ್ರೂಷಕರು | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಭುವನಹಳ್ಳಿ, ತುಮಕೂರು ಜಿಲ್ಲೆ | 19.06.2014 | ಸದರಿರವರ ಪತಿಯವರು ನಮ್ಮ ಸಂಘದ ಶಾಲೆಯಲ್ಲಿ ಪ್ರ.ದ.ಸರಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಯಾವುದೇ ರೀತಿಯ ಮನವಿಯನ್ನು ಸಲ್ಲಿಸಿರುವುದಿಲ್ಲಾ ಹಾಗೂ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲಾ ವೆಂದು ಹಿಂಬರಹದ ಮೂಲಕ ತಿಳಿಸಿದೆ. |
| 8 | ಬಸವಂತಪ್ಪ ಹೆಚ್ | ಪ್ರಾಂಶುಪಾಲರು | ಮೊರಾರ್ಜಿ ವಸತಿ ಶಾಲೆ, ಹಳ್ಳಿಬೈಲ್, ಹಾವೇರಿ ಜಿಲ್ಲೆ | 10.04.2015 | ಸದರಿ ಕಡತವನ್ನು ಸರ್ಕಾರದ ತಿರ್ಮಾನಕ್ಕೆ ಸಲ್ಲಿಸಲಾಗಿರುತ್ತದೆ |
| 9 | ತಿಪ್ಪೇಸ್ವಾಮಿ ಎ | ವಿಜ್ಞಾನ ಶಿಕ್ಷಕರು | ಮೊರಾರ್ಜಿ ವಸತಿ ಶಾಲೆ, ಅವರೆಗೆರೆ, ದಾವಣಗೆರೆ ಜಿಲ್ಲೆ | 19.06.2015 | ಸಂಬಂಧಿತ ಪ್ರಾಂಶುಪಾಲರಿಗೆ ಅರ್ಜಿ ಮತ್ತು ನಿಗದಿತ ಇತರ ದಾಖಲಾತಿಗಳನ್ನು ನೀಡುವಂತೆ ಪತ್ರ ರವಾನಿಸಲಾಗಿದ್ದು, ವರದಿ ಬಂದ ನಂತರ ಕ್ರಮವಹಿಸಲಾಗುವುದು. |
| 10 | ಭೀಮರಾಯ ಮರಗಪ್ಪ ಮಾದರ | ಕನ್ನಡ ಶಿಕ್ಷಕರು | ಮೊರಾರ್ಜಿ ವಸತಿ ಶಾಲೆ, ದನ್ನೂರು, ಹುನಗುಂದ ತಾ. ಬಾಗಲಕೋಟೆ | 25.02.2015 | ಸದರಿ ಕಡತವನ್ನು ಸರ್ಕಾರದ ತಿರ್ಮಾನಕ್ಕೆ ಸಲ್ಲಿಸಲಾಗಿರುತ್ತದೆ |

ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಖಾಯಂ ಸಿಬ್ಬಂದಿಗಳಿಗೆ **GROUP GRATUITY,GROUP INSURANCE, EMPLOYEES PROVIDENT FUND ,EARNED LEAVE ENCASHMENT** ಸೌಲಭ್ಯಗಳನ್ನು ಅಳವಡಿಸಲಾಗಿದೆ .ಈ ಸೌಲಭ್ಯಗಳು ವಿಸ್ತರಿಸಿರುವುದಿಲ್ಲಾ ಪ್ರಸ್ತುತ್ತಾ ಆರ್ಥಿಕ ಇಲಾಖೆಯ ನಿರ್ದೇಶನದಂತೆ **NEW PENSION SCHEME** ಅಳವಡಿಸಿಕೊಳ್ಳುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆ.ಸಂಘದಲ್ಲಿ ಕಾರ್ಯನಿರ್ವಹಿಸುತ್ತಿರುವ 13 ಸಿಬ್ಬಂದಿಗಳು ಮರಣ ಹೊಂದಿದ್ದು ಮೃತ ಕುಟುಂಬದ ಸದಸ್ಯರಿಗೆ ನಿವೃತ್ತಿ ಸೌಲಭ್ಯ ಈ ವರಿವಿಗೂ ನೀಡದೇ ಇರುವುದರಿಂದ ಇವರ ಕುಟುಂಬದವರು ಮನವಿಯನ್ನು ಸಂಘಕ್ಕೆ ಸಲ್ಲಿಸಿದ್ದು ಈ ಬಗ್ಗೆ ಸಂಘದ ಉಪಾಧ್ಯಾಕ್ಷರೊಂದಿಗೆ ವಿಷಯವನ್ನು ಚರ್ಚಸಿಲಾಗಿದೆ. ಮೃತ ಕುಟುಂಬದ ಸದಸ್ಯರುಗಳಿಗೆ. ಸಂಘವು ವಸತಿ ಶಾಲೆಗಳ ವಿಧ್ಯಾರ್ಥಿಗಳು ಆಕಸ್ಮಕವಾಗಿ ಮೃತ ಹೊಂದಿದಲ್ಲಿ ರೂ 1.00 ಲಕ್ಷಗಳನ್ನು ಪರಿಹಾರ ಧನವನ್ನು ಆಡಳಿತ ಮಂಡಳಿಯ ತಿರ್ಮಾನದಂತೆ ನೀಡುತ್ತಿದ್ದು ಈ ಮಾದರಿಯಲ್ಲಿ ಮೃತ ಕುಟುಂಬದವರಿಗೆ ಪರಿಹಾರಧನ ನೀಡುವ ಬಗ್ಗೆ ಪರಶಿಲಿಸಲು ಉಪಾಧ್ಯಕ್ಷರು ತಿಳಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಧನವನ್ನು ಆಡಳಿತ ಮಂಡಳಿಯ ತೀರ್ಮಾನದಂತೆ ನೀಡುತ್ತಿದ್ದು ಈ ಮಾದರಿಯಲ್ಲಿ ಮೃತ ಕುಟುಂಬದವರಿಗೆ ಪರಿಹಾರಧನ ನೀಡುವ ಬಗ್ಗೆ ಪರಶೀಲಿಸಲು ಉಪಾಧ್ಯಕ್ಷರು ತಿಳಿಸಿರುತ್ತಾರೆ.

01.04..2006 ಕ್ಕಿಂತ ಮುಂಚೆ ನೇಮಕಗೊಂಡ ಸರ್ಕಾರಿ ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮ 292(B)ರಂತೆ Death Gratuty ನೀಡಲು ಅವಕಾಶವಿದೆ. ಆದರೆ ದಿನಾಂಕ:01.04.2006 ರ ನಂತರ ನೇಮಕಗೊಂಡ ಸರ್ಕಾರಿ ನೌಕರರಿಗೆ New Pension scheme ಅನ್ನು ಅಳವಡಿಸಿಕೊಳ್ಳಲು ಆರ್ಥಿಕ ಇಲಾಖೆ ಆದೇಶ ನೀಡಿದೆ. ಮೃತ ಕುಟುಂಬದವರಿಗೆ NPS ಅಡಿಯಲ್ಲಿ ಪರಿಹಾರ ಧನ ನೀಡುವ ಬಗ್ಗೆ ಆರ್ಥಿಕ ಇಲಾಖೆಯ ನಿರ್ದೇಶನ ಕೋರಬಹುದಾಗಿದೆ. ಆದಾಗ್ಯೂ ಮಾನ್ಯ ಸಂಘದ ಉಪಾಧ್ಯಕ್ಷರ ಸೂಚನೆಯಂತೆ ಆಕಸ್ಮಿಕ ಮರಣ ಹೊಂದಿದ್ದ ವಿದ್ಯಾರ್ಥಿಗಳ ಪೋಷಕರುಗಳಿಗೆ ಪರಿಹಾರ ನೀಡುವ ಮಾದರಿಯಂತೆ ಪರಿಹಾರ ನೀಡುವ ಬಗ್ಗೆ ಆಡಳಿತ ಮಂಡಳಿಯ ಮುಂದೇ ವಿಷಯ ಮಂಡಿಸಿ ತೀರ್ಮಾನ ಕೋರಿದೆ.

**ತೀರ್ಮಾನ:**

**ವಿಷಯವನ್ನು ಸಭೆಯು ಚರ್ಚಿಸಿತು. ವಸತಿ ಶಾಲೆಗಳಲ್ಲಿ ಆಕಸ್ಮಿಕ ಮುರಣ ಹೊಂದಿದ ವಿದ್ಯಾರ್ಥಿಗಳ ಪೋಷಕರುಗಳಿಗೆ ರೂ.1.00 ಲಕ್ಷಗಳ ಪರಿಹಾರ ಧನವನ್ನು ಸಂಘವು ನೀಡುತ್ತಿದ್ದು, ಅದೇ ಮಾಧರಿಯಲ್ಲಿಯೇ ಮೃತರಾದ ಬೋಧಕ/ಬೋಧಕೇತರ ಖಾಯಂ ಸಿಬ್ಬಂದಿಗಳ ಅವಲಂಬಿತರಿಗೆ ಪರಿಹಾರ ಧನ ನೀಡುವ ಬಗ್ಗೆ ಸರ್ಕಾರಕ್ಕ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು, ಪಾವತಿಸಲು ತೀರ್ಮಾನಿಸಿತು.**

## ಹೆಚ್ಚುವರಿ ವಿಷಯ ಸಂಖ್ಯೆ: 6

**ವಸತಿ ಶಾಲೆ/ಕಾಲೇಜುಗಳ ಕಟ್ಟಡ ಕಾಮಗಾರಿಗಳ ಹಾಗೂ ವಿದ್ಯಾರ್ಥಿನಿಲಯಗಳ ಕಟ್ಟಡಗಳ ಕಾಮಗಾರಿಗಳ ಪರಿಷ್ಕೃತ ಪರಿಮಾಣವನ್ನು ಅನುಮೋದಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 44ನೇ ಆಡಳಿತ ಮಂಡಳಿ ಸಭೆಯಲ್ಲಿ ಕಾಮಗಾರಿಗಳ ಅನುಮೋದಿತ ಪರಿಮಾಣವು ಹೆಚ್ಚಾಗಿ, ಅನುಮೋದಿತ ಮೊತ್ತಕ್ಕಿಂತ ಕಾಮಗಾರಿಯ ಮೊತ್ತವು ಹೆಚ್ಚಾದಲ್ಲಿ ಕಾಮಗಾರಿಯ ಮೊತ್ತವನ್ನು ಅನುಮೋದಿತ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಶೇ.5ರಷ್ಟು ಮೊತ್ತಕ್ಕೆ ಪರಿಷ್ಕೃತ ಬಿ.ಓ.ಕ್ಯೂ ಅನುಮೋದಿಸುವ ಅಧಿಕಾರವನ್ನು ಸಂಘದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡಲಾಗಿದೆ. ಸಂಘವು ಶೇ.5ಕ್ಕಿಂತ ಹೆಚ್ಚಾದ ಕಾಮಗಾರಿಯ ಮೊತ್ತಕ್ಕೆ ಸಂಘದ ಉಪಾಧ್ಯಕ್ಷರ ಅನುಮೋದನೆ ಪಡೆಯಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**

**ವಸತಿ ಶಾಲೆ/ಕಾಲೇಜುಗಳ ಕಟ್ಟಡ ಕಾಮಗಾರಿಗಳ ಹಾಗೂ ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ಕಾಮಗಾರಿಗಳ ಅನುಮೋದಿತ ಪರಿಮಾಣವು ಹೆಚ್ಚಾಗಿ ಅನುಮೋದಿತ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಶೇ.5% ಕ್ಕಿಂತ ಹೆಚ್ಚಾದ ಕಾಮಗಾರಿಯ ಮೊತ್ತಕ್ಕೆ ಸಂಘದ ಉಪಾಧ್ಯಕ್ಷರು ಅನುಮೋದಿಸಿರುವುದನ್ನು ಸಭೆಯು ಅವಗಾಹಿಸಿ, ಅನುಮೋದಿಸಿತು.**

<u>ಹೆಚ್ಚುವರಿ ವಿಷಯ ಸಂಖ್ಯೆ: 7</u>

<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಾಸ್ತು ಶಿಲ್ಪಿಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿದ್ದು, ಈ ಕಾಮಗಾರಿಗಳನ್ನು ತಾಂತ್ರಿಕ ಸಲಹೆಗಾರರು ತಯಾರಿಸುವ ವಿನ್ಯಾಸ ಮತ್ತು ಅಂದಾಜು ಪಟ್ಟಿ ಅನ್ವಯ ಕೈಗೆತ್ತಿಕೊಳ್ಳಲಾಗುತ್ತಿದೆ. ಸಂಘದ 64ನೇ ಆಡಳಿತ ಮಂಡಳಿಯ ಸಭೆಯಲ್ಲಿ ಸಂಘಕ್ಕೆ ತನ್ನದೇ ಆದ ವಾಸ್ತು ಶಿಲ್ಪಿಗಳನ್ನು ಅವಶ್ಯಕವಿರುವುದಾಗಿ ಮನಗಂಡು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ- 1999ರ ಅನ್ವಯ ಸಂಘಕ್ಕೆ ವಾಸ್ತುಶಿಲ್ಪಿಗಳನ್ನು Empanel ಮಾಡಿ, ನೇಮಕ ಮಾಡಿಕೊಳ್ಳಲು ಪ್ರತ್ಯೇಕ ಕಡತ ಸಲ್ಲಿಸಿ, ಅನುಮೋದನೆ ಪಡೆಯುವ ಬಗ್ಗೆ ತೀರ್ಮಾನಿಸಿತು. ಈ ಹಿನ್ನೆಲೆಯಲ್ಲಿ ದಿನಾಂಕ:28-08-2015 ರಂದು ಟೆಂಡರ್ ಕರೆದಿದ್ದು, ಕಾರಣಾಂತರಗಳಿಂದ ಅದು ರದ್ದುಗೊಳಿಸಲ್ಪಟ್ಟಿರುತ್ತದೆ. ಈ ವಿಷಯವನ್ನು ಪ್ರಸ್ತಾಪಿಸಿ ಸರ್ಕಾರಕ್ಕೆ ಮಂಡಿಸಿದ ಕಡತದಲ್ಲಿ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಲು ನಿರ್ದೇಶಿಸಿದ ಹಿನ್ನೆಲೆಯಲ್ಲಿ ಸಭೆಯ ಅವಗಾಹನೆಗೆ ಮತ್ತು ತೀರ್ಮಾನಕ್ಕಾಗಿ ವಿಷಯವನ್ನು ಮಂಡಿಸಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಸಂಘಕ್ಕೆ ತನ್ನದೇ ಆದ ವಾಸ್ತು ಶಿಲ್ಪಿಗಳನ್ನು ನೇಮಕ ಮಾಡಿಕೊಳ್ಳುವುದು ಅವಶ್ಯಕವಿರುವುದನ್ನು ಮನಗಂಡು, ನಿಯಮಾನುಸಾರ Empanel ಮಾಡಿ, ನೇಮಕ ಮಾಡಿಕೊಳ್ಳಲು ತೀರ್ಮಾನಿಸಿತು.**

<u>ಹೆಚ್ಚುವರಿ ವಿಷಯ ಸಂಖ್ಯೆ: 8</u>

<u>ಮಾಹಿತಿ ಹಾಗೂ ಅಂಕಿಅಂಶ ಶಾಖೆಯನ್ನು ಸೃಜಿಸಿರುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯ ಗಣಕಯಂತ್ರ ಶಾಖೆಯನ್ನು ಮಾಹಿತಿ ಹಾಗೂ ಅಂಕಿ ಅಂಶ ಶಾಖೆಯಾಗಿ ಮಾರ್ಪಡಿಸಿ, ಕವಶಿಸಸ/ಆಡಳಿತ(1)/ಸಿಆರ್19/2015-16, ದಿನಾಂಕ: 22.07.2015 ರಂದು ಆದೇಶಿಸಿದೆ. ಅದರಂತೆ ಹೊಸದಾಗಿ ಸೃಜಿಸಿರುವ ಮಾಹಿತಿ ಹಾಗೂ ಅಂಕಿ ಅಂಶ ಶಾಖೆಗೆ ವ್ಯವಸ್ಥಾಪಕರು (ಮಾಹಿತಿ ಮತ್ತು ಅಂಕಿಅಂಶ)-1, ಶಾಖಾ ಮುಖ್ಯಸ್ಥರಾಗಿರುತ್ತಾರೆ. ಅವರ ಅಡಿಯಲ್ಲಿ ಸೀನಿಯರ್ ಪ್ರೋಗ್ರಾಮರ್- 1, ಪ್ರೋಗ್ರಾಮರ್-3, ಮತ್ತು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಅಂಕಿ ಅಂಶ ಶಾಖೆಗೆ ವ್ಯವಸ್ಥಾಪಕರು (ಮಾಹಿತಿ ಮತ್ತು ಅಂಕಿಅಂಶ)-1, ಶಾಖಾ ಮುಖ್ಯಸ್ಥರಾಗಿರುತ್ತಾರೆ. ಅವರ ಅಡಿಯಲ್ಲಿ ಸೀನಿಯರ್ ಪ್ರೋಗ್ರಾಮರ್- 1, ಪ್ರೋಗ್ರಾಮರ್-3, ಮತ್ತು

ಅಂಕಿಅಂಶ ಸಹಾಯಕರು-1 ಸೇರಿದಂತೆ ಒಟ್ಟು 6 ಸಿಬ್ಬಂದಿಗಳ ಅವಶ್ಯಕತೆಯಿದ್ದು ಈ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಶಾಖೆಯನ್ನು ಬಲಪಡಿಸುವುದರಿಂದ ಆಡಳಿತಾತ್ಮಕ ಸುಧಾರಣೆಯಾಗುತ್ತದೆ.

ಪ್ರಸ್ತುತ ಈ ಶಾಖೆಯಲ್ಲಿ ವಸತಿ ಶಾಲೆಗಳಿಂದ ಇಬ್ಬರು ನಿಯೋಜಿತ ಕಂಪ್ಯೂಟರ್ ಶಿಕ್ಷಕರುಗಳು ಹಾಗೂ ಹೊರಸಂಪನ್ಮೂಲವತಿಯಿಂದ ಒಬ್ಬರು ಒಟ್ಟು 3 ಜನ ಕಂಪ್ಯೂಟರ್ ಪ್ರೋಗ್ರಾಮರ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಆದ್ದರಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಮೇಲ್ಕಂಡ ಹುದ್ದೆಗಳೊಂದಿಗೆ ಮಾಹಿತಿ ಹಾಗೂ ಅಂಕಿಅಂಶ ಶಾಖೆಯನ್ನು ಸೃಜಿಸಲು ಆಡಳಿತ ಮಂಡಳಿ ಮುಂದೆ ವಿಷವಯನ್ನು ಮಂಡಿಸಿ, ಅನುಮೋದನೆ ಕೋರಿದೆ. ಒಪ್ಪಿದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.

<u>ತೀರ್ಮಾನ:</u>

**ಆಡಳಿತ ಮಂಡಳಿಯು ವಿಷಯವನ್ನು ಚರ್ಚಿಸಿತು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ ಮಾಹಿತಿ ಹಾಗೂ ಅಂಕಿ ಅಂಶ ಶಾಖೆಯನ್ನು ಅಗತ್ಯ ಹುದ್ದೆಗಳೊಂದಿಗೆ ಸೃಜಿಸುವ ಬಗ್ಗೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ, ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಆದೇಶ ಪಡೆಯಲು ತೀರ್ಮಾನಿಸಿತು.**

## <u>ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳ ಮೇಲೆ ಚರ್ಚೆ</u>

ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು 2013-14ನೇ ಸಾಲಿನಲ್ಲಿ ಜನತಾ ದರ್ಶನ ನಡೆಸಿ, ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ವಸತಿ ಶಾಲೆ/ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳಿಗೆ ಹೊರಸಂಪನ್ಮೂಲವತಿಯಿಂದ ನೇಮಕ ಮಾಡಿಕೊಳ್ಳಲು ನಿರ್ದೇಶನ ನೀಡಿದ್ದರನ್ವಯ ಸಿಬ್ಬಂದಿಗಳನ್ನು ಹೊರಸಂಪನ್ಮೂಲದಿಂದ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಸದರಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ವಿವರಗಳನ್ನು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು/ವಸತಿ ಶಾಲೆಗಳ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಪ್ರಾಂಶುಪಾಲರುಗಳಿಂದ ಪಡೆದು, ಪರಿಶೀಲಿಸಿ, ಸದರಿ ಸಿಬ್ಬಂದಿಗಳಿಗೆ ವೇತನ ಪಾವತಿಸಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸೂಚಿಸಿದರು. ಈ ಬಗ್ಗೆ ಸಭೆಯು ದೀರ್ಘವಾಗಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಿತು.

**ತೀರ್ಮಾನ:**

**ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಜನತಾದರ್ಶನ ನಡೆಸಿ ನಿರ್ದೇಶನ ನೀಡಿದರನ್ವಯ ನೇಮಕವಾದ ಹೊರಸಂಪನ್ಮೂಲ ಸಿಬ್ಬಂದಿಗಳು, ವಸತಿ ಶಾಲೆ/ಕಾಲೇಜುಗಳಲ್ಲಿ ಖಾಲಿ ಹುದ್ದೆಗಳ ಎದುರು ಕರ್ತವ್ಯ ನಿರ್ವಹಿಸಿದ್ದಲ್ಲಿ ಅಂತಹ ಸಿಬ್ಬಂದಿಗಳಿಗೆ ವೇತನ ಪಾವತಿಸುವುದು ಸೂಕ್ತವಾಗಿದೆ. ಅಂತಹ ಸಿಬ್ಬಂದಿಗಳ ಸಂಖ್ಯೆ ಮತ್ತು ವೇತನವನ್ನು ಲೆಕ್ಕಚಾರ ಮಾಡಿ, ವೇತನ ಬಿಡುಗಡೆಗೆ ಕ್ರಮವಹಿಸಲು ತೀರ್ಮಾನಿಸಿತು.**

ಸಭೆಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

(ಹೆಚ್.ಆಂಜನೇಯ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು,
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು